# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಜುಲೈ 30, 2022

ಸಂಪುಟ : 49 ಸಂಚಿಕೆ : 77 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com







## ಕಾಯಕ ಭಗವಂತನಿಗಿಂತ ಶ್ರೇಷ್ಠ: ಸಿದ್ಧರಾಮ ಶ್ರೀ

### ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ಪ್ರಶಸ್ತಿ ಸ್ವೀಕರಿಸಿದ ಸ್ವಾಮೀಜಿ



ದಾವಣಗೆರೆ, ಜು. 29 – ವ್ಯಕ್ತಿ ಕ್ರಿಯಾಶೀಲ ಹಾಗೂ ಕಾಯಕಶೀಲ ಆದಾಗ ಮಾತ್ರ ಯಶಸ್ಸು ಸಾಧ್ಯ. ಹೀಗಾಗಿಯೇ ಕಾಯಕ ಭಗವಂತನಿಗಿಂತ ಶ್ರೇಷ್ಠ ಎಂದು ಶರಣರು ಪ್ರತಿಪಾದಿಸಿದ್ದರು ಎಂದು ತೋಂಟದಾರ್ಯ ಜಗದ್ಗುರು ಶ್ರೀ ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ತಿಳಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನಗಳ ವತಿಯಿಂದ ನೀಡಲಾಗುವ ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ಪ್ರಶಸ್ತಿ ಸ್ವೀಕರಿಸಿ, ಶ್ರೀಗಳು ಮಾತನಾಡಿದರು.

ಭಗವಂತನ ನಾಮಸ್ಮರಣೆ ಜೊತೆಗೆ ಕಾಯಕ ಮಾಡುವುದೇ ಭಕ್ತಿ. ಕಾಯಕವು ಸತ್ಯ ಶುದ್ಧವಾಗಿರಬೇಕು. ಭವದ ಆಸೆಯಿಟ್ಟು ಕಾಯಕ ಮಾಡಬಾರದು ಎಂದು ಹೇಳಿದರು.

ಕಾಯಕದಿಂದ ದೊರೆತಿದ್ದನ್ನು ಸಮಾಜಕ್ಕೆ ದಾಸೋಹದ ರೂಪದಲ್ಲಿ ನೀಡಬೇಕು. ನಮಗೆ ಬಂದದ್ದನ್ನೆಲ್ಲಾ ನಾವೇ ಇಟ್ಟುಕೊಂಡರೆ ಸಂಸಾರ ನೌಕೆ ಸಾಗು ವುದಿಲ್ಲ. ಸಮಾಜದಿಂದ ಬಂದಿದ್ದನ್ನು ಸಮಾಜಕ್ಕೇ ಸಲ್ಲಿಸಬೇಕು ಎಂದರು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮಹೇಶ್ ಜೋಷಿ, ದಾವಣಗೆರೆಯಲ್ಲೇ ಮುಂದಿನ ವಿಶ್ವ ಕನ್ನಡ ಕನ್ನಡ ಸಮ್ಮೇಳನ ನಡೆಯಲಿದೆ. ಇದಕ್ಕಾಗಿ ನಾನು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ ಎಂದು ತಿಳಿಸಿದರು.

ದಾವಣಗೆರೆ (3ನೇ ಪುಟಕ್ಕೆ)

#### ಪ್ರಶಸ್ತಿ ಹಣ ಅಧ್ಯಯನ ಕೇಂದ್ರಕ್ಕೆ

ದಾವಣಗೆರೆ ವಿಶ್ವವಿದ್ಯಾನಿಲಯ ದಲ್ಲಿ ಶರಣ ಸಂಸ್ಕೃತಿ ಅಧ್ಯಯನ ಕ್ಕಾಗಿ ಮಾಗನೂರು ಬಸಪ್ಪ ಅವರ ಹೆಸರಿನಲ್ಲಿ ಕೇಂದ್ರ ತೆರೆಯಲು ಪ್ರಸ್ತಾಪಿಸಲಾಗಿದೆ. ಉದ್ದೇಶಿತ ಕೇಂದ್ರಕ್ಕಾಗಿ ತಮಗೆ ಮಾಗನೂರು ಬಸಪ್ಪ ಪ್ರಶಸ್ತಿಯ ಜೊತೆ ನೀಡಲಾದ 50 ಸಾವಿರ ರೂ. ಗಳನ್ನು ಕೊಡು (3ನೇ ಪುಟಕ್ಕೆ)

## ಪ್ರವೀಣ್ ಹತ್ಯೆ ತನಿಖೆಗೆ ರಾಷ್ಟ್ರೀಯ ತನಿಖಾ ದಳ

ಬೆಂಗಳೂರು, ಜು. 29 - ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಅವರ ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ ವಹಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರವೀಣ್ ಹತ್ಯೆ ವ್ಯವಸ್ಥಿತವಾಗಿ ಆಗಿದೆ ಹಾಗೂ ಇದೊಂದು ಅಂತರರಾಜ್ಯಕ್ಕೆ ಸೇರಿರುವುದರಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ತನಿಖೆ ತೀವ್ರಗತಿಯಲ್ಲಿ ನಡೆಯುತ್ತಿದ್ದು, ಮಾಹಿತಿ ಪಡೆದ ನಂತರ ಕೇಂದ್ರ ಗೃಹ ಇಲಾಖೆ ಪತ್ರ ಬರೆಯಲಿದೆ. ಕೇರಳ ಗಡಿಯಲ್ಲಿ ಎರಡು ರಾಜ್ಯಗಳನ್ನು ಸಂಪರ್ಕಿಸುವ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ, ಚೆಕ್ ಪೋಸ್ಟ್‌ಗಳನ್ನು ಹಾಕಲಾಗುವುದು. ಸೂಕ್ಷ್ಮ ಊರುಗಳಲ್ಲಿ ತಾತ್ಕಾಲಿಕ ಪೊಲೀಸ್ ಕ್ಯಾಂಪ್‌ಗಳು, ಹಲವಾರು ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಬೇಕು, ರಾತ್ರಿ ಗಸ್ತನ್ನು ಹೆಚ್ಚಿಸಬೇಕು ಹಾಗೂ ಕೆ.ಎಸ್.ಆರ್.ಪಿಯ ಮತ್ತೊಂದು ತುಕಡಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ನಿಯೋಜಿಸಲು ಸೂಚಿಸಲಾಗಿದೆ ಎಂದರು.

#### ಜಿಲ್ಲಾ ಮಟ್ಟದಲ್ಲಿ ಧಾರ್ಮಿಕ ಮುಖಂಡರಿಂದ ಶಾಂತಿ ಸಭೆ ನಡೆಸಲು ತೀರ್ಮಾನ: ಬೊಮ್ಮಾಯಿ

ನಿನ್ನೆ ಸುರತ್ಕಲ್‌ನಲ್ಲಿ ನಡೆದ ಹತ್ಯೆಯ ಬಗ್ಗೆಯೂ ತೀವ್ರಗತಿಯಲ್ಲಿ ತನಿಖೆಯಾಗಿ, ತಪ್ಪಿತಸ್ಥರನ್ನು ಬಂಧಿಸಬೇಕು. ಅದಕ್ಕೂ ಕೂಡ ತಂಡಗಳನ್ನು ರಚಿಸಿ ತನಿಖೆ ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಲಾಗಿದೆ ಎಂದರು. ಜಿಲ್ಲಾ ಮಟ್ಟದಲ್ಲಿ ಧಾರ್ಮಿಕ ಮುಖಂಡರನ್ನು ಕರೆದು ಶಾಂತಿ ಸಭೆಗಳನ್ನು ನಡೆಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ನಮಗೆ ಎಲ್ಲ ಜನರ ಜೀವ ಮುಖ್ಯ. ನಾವು ಎಲ್ಲರನ್ನೂ ಸರಿಸಮಾನವಾಗಿ ಕಾಣುತ್ತೇವೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಮಂಗಳೂರಿನಿಂದ ಹಿಂತಿರುಗಿದ ನಂತರ ಮಂಗಳೂರಿನಲ್ಲಿ ಮತ್ತೊಂದು ಕೊಲೆಯಾಗಿರುವ ಬಗ್ಗೆ ವಿಷಯ ತಿಳಿದು ಮಾಹಿತಿ ಪಡೆಯಲಾಗಿದೆ. ಕಾನೂನು ಸುವ್ಯವಸ್ಥೆ ಎ.ಡಿ.ಜಿ.ಪಿ ಅವರನ್ನು ಅಲ್ಲಿಯೇ ಇದ್ದು ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದ್ದೇನೆ ಎಂದರು.

ಎಲ್ಲಾ ಮೂರು ಪ್ರಕರಣಗಳಲ್ಲಿಯೂ ಕಠಿಣ ಕ್ರಮ ವಹಿಸಲಾಗುವುದು. ಕಾನೂನಿನ ವ್ಯಾಪ್ತಿಯಲ್ಲಿ ಅಗತ್ಯವಿರುವ ಕ್ರಮ ವಹಿಸಲಾಗುವುದು. ಅದು ಯು.ಪಿ ಮಾದರಿ ಅಥವಾ ಕರ್ನಾಟಕ ಮಾದರಿಯಾಗಿರಬಹುದು ಎಂದು ಮುಖ್ಯ ಮಂತ್ರಿಗಳು ತಿಳಿಸಿದರು.

ಮೂ ರು (2ನೇ ಪುಟಕ್ಕೆ)

## ಭತ್ತದ ಬಿತ್ತನೆ ವಿವರ ನಿಲ್ಲಿಸಿದ ಕೇಂದ್ರ

ನವದೆಹಲಿ, ಜು. 29 – ಮಳೆ ವೈಪರೀತ್ಯದ ಕಾರಣದಿಂದ ದೇಶದ ಹಲವೆಡೆ ಭತ್ತದ ಬಿತ್ತನೆ ಕುಂಠಿತವಾಗಿದೆ ಎಂಬ ವರದಿಗಳ ನಡುವೆ, ಭತ್ತ ಹಾಗೂ ಇತರೆ ಎರಡು ಬೆಳೆಗಳ ಬಿತ್ತನೆ ವಿವರ ನೀಡುವುದನ್ನು ಕೇಂದ್ರ ಕೃಷಿ ಸಚಿವಾಲಯ ನಿಲ್ಲಿಸಿದೆ. ಭತ್ತ, ಹತ್ತಿ ಹಾಗೂ ಕಬ್ಬಿನ ಬಿತ್ತನೆ ವಿವರಗಳನ್ನು ಎರಡು ವಾರಗಳಿಂದ ನೀಡುತ್ತಿಲ್ಲ. ಅದಕ್ಕೂ ಮುಂಚೆ ಪ್ರತಿ ವಾರ ಈ ಬೆಳೆಗಳ ಬಿತ್ತನೆ ವಿವರ ನೀಡಲಾಗುತ್ತಿತ್ತು. ಕಳೆದ ಜುಲೈ 17ರವರೆಗೆ ಭತ್ತದ ಬಿತ್ತನೆ (3ನೇ ಪುಟಕ್ಕೆ)

## ಸಾರ್ವಜನಿಕರ ದೂರು ಬಗೆಹರಿಸುವ ಅವಧಿ 30 ದಿನಗಳಿಗೆ ಇಳಿಕೆ

ನವದೆಹಲಿ, ಜು. 29 – ಸಾರ್ವಜನಿಕರ ದೂರುಗಳನ್ನು ಬಗೆಹರಿಸುವ ಅವಧಿಯನ್ನು ಈಗಿರುವ 45 ದಿನಗಳಿಂದ 30 ದಿನಗಳಿಗೆ ಇಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅಲ್ಲದೇ, ದೂರೊಂದರ ವಿರುದ್ಧ ದಾಖಲಾಗುವ ಮನವಿ ವಿಲೇವಾರಿಯಾಗುವವರೆಗೂ ಮೂಲ ದೂರನ್ನು ಇತ್ಯರ್ಥಪಡಿಸದಿರಲು ನಿರ್ಧರಿಸಲಾಗಿದೆ. 30 ದಿನಗಳ ಕಾಲಮಿತಿಯಲ್ಲಿ ದೂರು ಬಗೆಹರಿಸಲು ಸಾಧ್ಯವಾಗದೇ ಇದ್ದರೆ, ಇದಕ್ಕೇನು ಕಾರಣ ಎಂಬುದನ್ನು ಸಂಬಂಧಪಟ್ಟ ನಾಗರಿಕರಿಗೆ ತಿಳಿಸಲಾಗುವುದು.

## ಸ್ಥಳೀಯ ವೀರಾಗ್ರಣಿಗಳನ್ನು, ಐತಿಹಾಸಿಕ ವ್ಯಕ್ತಿಗಳನ್ನು ಪರಿಚಯಿಸಿ



#### ಚಳಗೇರಿಯಲ್ಲಿ ತುಕ್ಕಾಭವಾನಿ ದೇವಸ್ಥಾನದ ರಜತೋತ್ಸವ ಸಮಾರಂಭದಲ್ಲಿ ತರಳಬಾಳು ಶ್ರೀ

ರಾಣೇಬೆನ್ನೂರು, ಜು.29- ಶಾಲೆಗಳಲ್ಲಿ ಪಠ್ಯದ ಜೊತೆಗೆ ಸ್ಥಳೀಯ ವೀರಾಗ್ರಣಿಗಳ, ಐತಿಹಾಸಿಕ ವ್ಯಕ್ತಿಗಳನ್ನು ಪರಿಚಯಿಸುವುದು, ಪ್ರಾದೇಶಿಕ ಮಟ್ಟದಲ್ಲಿ ವಿಶೇಷ ಪಾಠ ಮಾಡಬೇಕು. ಸರ್ಕಾರ ಈ ದಿಶೆಯಲ್ಲಿ ತೀವ್ರ ಚಿಂತನೆ ಮಾಡಬೇಕು ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಚಳಗೇರಿಯಲ್ಲಿ ಇಂದು ಏರ್ಪಾಡಾಗಿದ್ದ ತುಕ್ಕಾಭವಾನಿ ದೇವಸ್ಥಾನದ ರಜತೋತ್ಸವ ಹಾಗೂ ಸಮುದಾಯ ಭವನದ ಉದ್ಘಾಟನೆಯನ್ನು ನೆರವೇರಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ನಮ್ಮ ಮಕ್ಕಳಿಗೆ ಅಮೇರಿಕಾ, ಇಸ್ರೇಲ್, ಜಪಾನ್, ಜರ್ಮನಿ ದೇಶಗಳ ಪರಿಚಯಕ್ಕಿಂತ ನಮ್ಮ ದೇಶದ ಸಂಪೂರ್ಣ ಪರಿಚಯ ಆಗಬೇಕು ಎಂದ ಶ್ರೀಗಳು, ಛತ್ರಪತಿ ಶಿವಾಜಿ, ಕೆಳದಿ ಚನ್ನಮ್ಮ, ಕಿತ್ತೂರು ರಾಣಿ ಚೆನ್ನಮ್ಮ ಮುಂತಾದವರ ಚರಿತ್ರೆಯ ಪರಿಚಯದೊಂದಿಗೆ ರಾಷ್ಟ್ರಪ್ರಜ್ಞೆಯನ್ನು ಮೂಡಿಸುವಂತಾಗಬೇಕು ಎಂದು ಶ್ರೀಗಳು ಆಡಳಿತ ಯಂತ್ರವನ್ನು ಬಡಿದೆಬ್ಬಿಸುವಂತಹ ಮಾತುಗಳನ್ನಾಡಿದರು.

ಆರತಿಗೊಬ್ಬ ಮಗಳು ಕೀರುತಿಗೊಬ್ಬ ಮಗ ಎನ್ನುವ ಸ್ಲೋಗನ್ ಮುತ್ಠಾಳತನದ್ದು. ಹೆಣ್ಣುಮಕ್ಕಳು ಕೇವಲ ಆರತಿ ಮಾಡಲು ಸೀಮಿತರಾಗಿರಬೇಕಾ? ಎಂದು ಪ್ರಶ್ನಿಸಿದ ಶ್ರೀಗಳು, ವೀರ ವನಿತೆಯರಾಗಬೇಕು. ಅಂತಹ ಇತಿಹಾಸದ ಬೋಧನೆ ಅವಶ್ಯವಿದೆ ಎಂದರು.

ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಯಶವಂತ್‌ರಾವ್ ಜಾಧವ್ ಮಾತನಾಡಿ, ಕರ್ನಾಟಕದಲ್ಲಿರುವ ಎಲ್ಲಾ ಮರಾಠ ಸಮಾಜ ಬಾಂಧವರು ಕನ್ನಡಿಗರೇ ಆಗಿದ್ದು, ಇಲ್ಲಿನ ಇತರೆಲ್ಲಾ ಸಮಾಜದವರ ಜೊತೆ ಆತ್ಮೀಯ ಒಡನಾಡಿಗಳಾಗಿದ್ದಾರೆ ಎಂ.ಇ.ಎಸ್‌ನ ಕೆಲವರ ಕುಹಕ ತನದಿಂದ ಕರ್ನಾಟಕದಲ್ಲಿನ ಮರಾಠ ಜನರಿಗೆ ಅಪವಾದದ ಮಾತುಗಳು ಕೇಳಿಬರುತ್ತಿವೆ. ಕುವೆಂಪು ಅವತ್ತು ಸರ್ವ ಜನರ ಶಾಂತಿಯ ತೋಟ ಕರ್ನಾಟಕ ಎಂದು ಹೇಳಿದ್ದರು ಎಂದರು.

ಚಳಗೇರಿಯ ಡಾ. ಮಹಾಂತೇಶ್ವರ ಸ್ವಾಮೀಜಿ, ಶಾಸಕ ಅರುಣಕುಮಾರ ಪೂಜಾರ್, ಮಾಜಿ ಸಂಸದ ಐ.ಜಿ.ಸನದಿ, ಮುಖಂಡರಾದ ಮಂಜುನಾಥ್ ಗೌಡಶಿವಣ್ಣನವರ, ಜಟ್ಟೆಪ್ಪ ಕರಿಗೌಡ, ಗ್ರಾ.ಪಂ ಅಧ್ಯಕ್ಷರಾದ ಪ್ರಮೀಳಾ, ಉಪಾಧ್ಯಕ್ಷರಾದ ಮಂಜುಳಾ ಯಲವಟ್ಟಿ, ಶಿವಮೂರ್ತಿ ದಿಲ್ಲಿವಾಲಾ, ಪರಶುರಾಮ ಕಾಳೇರ ಮತ್ತಿತರರಿದ್ದರು. ಸುಮಿತ್ರ ಕುಸಗೂರ ಕಾರ್ಯಕ್ರಮ ನಿರೂಪಿಸಿದರು.

## ಪ್ರತಿ ಮನೆಯಲ್ಲಿ ಧ್ವಜ : ಅಭಿಯಾನ ಯಶಸ್ವಿಗಾಗಿ ಕರೆ

ಬೆಂಗಳೂರು, ಜು. 29 - ಆಗಸ್ಟ್ 13 ರಿಂದ 15 ರವರೆಗೆ ತಮ್ಮ ಮನೆಗಳ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಿ ಹರ್ ಘರ್ ತಿರಂಗಾ ಅಭಿಯಾನವನ್ನು ಯಶಸ್ವಿಗೊಳಿಸುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಕರೆ ನೀಡಿದ್ದಾರೆ.

ರಾಜ್ಯ ಮಟ್ಟದ ಸ್ವಾತಂತ್ರ್ಯ ದಿನಾಚರಣೆಯ ಕುರಿತು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ತಮ್ಮ ಮನೆಗಳ ಮೇಲೆ ರಾಷ್ಟ್ರ ಧ್ವಜ ಹಾರಿಸಿ ಇಡೀ ದೇಶಕ್ಕೇ ಮಾದರಿಯಾಗಲು ರಾಜ್ಯ ಸರ್ಕಾರಿ ನೌಕರರಿಗೆ ಇದೊಂದು ಸದಾವಕಾಶ ಎಂದು ಅವರು ಬಣ್ಣಿಸಿದ್ದಾರೆ.

ರಾಷ್ಟ್ರದೆಲ್ಲೆಡೆಯಂತೆ, ರಾಜ್ಯದಲ್ಲಿಯೂ ಆಗಸ್ಟ್ 13 ರಿಂದ 15 ರವರೆಗೆ ಹರ್ ಘರ್ ತಿರಂಗಾ ಅಂದರೆ ಮನೆ ಮನೆಯ ಮೇಲೆ ತ್ರಿವರ್ಣ ಧ್ವಜ ಹಾರಿಸುವ ಅಭಿಯಾನವನ್ನು ಆಯೋಜಿಸಲಾಗಿದೆ.


HR MITHRA

WANTED

SALES EXECUTIVE

• Qualification : Any Degree • Fresher or Experience in Sales preferred • 2 Wheeler with DL mandatory for male candidates • Fluency in English, Kannada other regional Language added adventages
• SALARY 15,000/- TO 20,000/-

Location : Bangalore, Davangere, Hubli, Belgaum, Dharwad, Bagalkote, Bellary

95133 36791 | 95133 36792

mail : sowmya@hrmithra.com, careers@hrmithra.com
www. hrmithra.com


## ಬಾತಿ ಗೌಡ್ರು ಶಾಂತಮ್ಮ ನಿಧನ



ದಾವಣಗೆರೆ ತಾಲ್ಲೂಕು ಪುಟಗನಾಳ್ ಗ್ರಾಮದ ವಾಸಿಯಾದ

**ಬಾತಿ ಗೌಡ್ರು ಶಾಂತಮ್ಮ (85)**


ಅವರು, ದಿನಾಂಕ : 29.07.2022ರ ಶುಕ್ರವಾರ ಮಧ್ಯಾಹ್ನ 12.25ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಇಬ್ಬರು ಹೆಣ್ಣು ಮಕ್ಕಳು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ.:30.7.2022ರಂದು ಬೆಳಿಗ್ಗೆ 10 ಗಂಟೆಗೆಪುಟಗನಾಳ್ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖಿತಪ್ತರು :

ಬಾತಿ ಗೌಡ್ರು ಹನುಮಂತಪ್ಪ ಮತ್ತು ಸಹೋದರರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಬಾತಿ ಗೌಡ್ರ ವಂಶಸ್ಥರು

ಫೋ. : 99640 08065, 90601 33224

## ಬೆಳ್ಳುಳ್ಳಿ ಸದಾನಂದಪ್ಪ ನಿಧನ



ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್, 3ನೇ ಮೇನ್, 3ನೇ ಕ್ರಾಸ್ ವಾಸಿ

**ಬೆಳ್ಳುಳ್ಳಿ ಸದಾನಂದಪ್ಪ**

ಇವರು ದಿನಾಂಕ 29.7.2022ರ ಶುಕ್ರವಾರ ಬೆಳಗಿನ ಜಾವ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 81 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.7.2022ರ ಶುಕ್ರವಾರ ಸಂಜೆ 5 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖಿತಪ್ತ ಕುಟುಂಬ ವರ್ಗ

97318 24834, 98864 19777


Mudegowdra Revanasiddappa Memorial Trust(R)



ಶ್ರೀ ಮುದೇಗೌಡ್ರ ರೇವಣಸಿದ್ದಪ್ಪ ಸ್ಕೂಲ್ ಆಫ್ ಇನ್‌ಫಾರ್ಮೇಶನ್ ಸೈನ್ಸ್ & ಮ್ಯಾನೇಜ್‌ಮೆಂಟ್

SRI MUDEGOWDRA REVANASIDDAPPA SCHOOL OF INFORMATION SCIENCE AND MANAGEMENT

(Affiliated to Davangere University Davangere, Approved by Govt, of Karnataka)

Bachelor of Computer Applications (BCA) and Bachelor of Commerce (B.Com)



ADMISSIONS OPEN FOR 2022-23

Trust Special :
BCA Course Fee Rs. 30,000/-
B.Com Course Fee Rs. 25,000/-

BCA
B.Com

CERTIFICATE COURSES OFFERED WITH DEGREE

Microsoft Certification, Oracle Certification, CCNA Certification, Full Stack web development course
Data Science with Python and R Programming Certification, Cyber security Certification

Placement and Career Development Cell
◆ Institutionalised culture and Processes that drive Placement and Career opportunities. ◆ Focus on activities that enhance student's employability and career development. ◆ Entrenched institution culture and methods that drive placement opportunities. ◆ Sensitisation of a student to a professional or entrepreneurship career starts from induction program. ◆ Co-curricular courses, real time projects and internship in collaboration with industry, Road map of technical, experimental and personality development courses offered preps the student for placement challenges. ◆ Customised preparations to face rigorous selection process of leading companies.

Infrastructure & Facilities ◆ Well-equipped laboratories. ◆ ICT enabled Teaching and Learning. ◆ State-of-Art conference rooms and seminar halls. ◆ Robust and scalable IT infrastructure with sufficient Computer Systems. ◆ Wi-Fi enabled campus with 500 mbps leased line (1:1) ◆ **Separate Girls and Boys Hostel.** ◆ Covid Care Centre

Foreign Placement assistance in USA & Middle East Countries

More Information: PRINCIPAL
Opp. Udaya Mart, Next to TVS Show Room
Hadadi Road, Davangere-577 005. **PH: 9686450470**
e-mail: principal@smr-sism.in

Dr. Basavaraj Mudegowdra
Founder of MR-Trust

## ಹೊನ್ನಾಳಿ : ರಾಜ್ಯ ಪಂಚಮಸಾಲಿ ಉಪಾಧ್ಯಕ್ಷ ಪರಮೇಶ್‌ಗೆ ಸನ್ಮಾನ



ಹೊನ್ನಾಳಿ, ಜು.29- ಪಂಚಮಸಾಲಿ ಸಮಾಜದ ರಾಜ್ಯ ಉಪಾಧ್ಯಕ್ಷರಾದ ಪರಮೇಶ್ ಪಟ್ಟಣಶೆಟ್ಟಿ ಅವರಿಗೆ ಸಮಾಜದ ರಾಜ್ಯಾಧ್ಯಕ್ಷ ಜಿ.ಬಿ.ಪಾಟೀಲ್ ಅವರ ನೇತೃತ್ವದಲ್ಲಿ ನಡೆದ ಹೊನ್ನಾಳಿ ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು. ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ವೀರಪ್ಪ ಬೆನಕನಹಳ್ಳಿ, ಗೌ. ಅಧ್ಯಕ್ಷ ಡಾ. ರಾಜಕುಮಾರ್, ಹರಿಹರ ಹೆಚ್.ಪಿ. ಬಾಬಣ್ಣ, ದಾವಣಗೆರೆ ಮಹಿಳಾ ಪದಾಧಿಕಾರಿಗಳಾದ ರಶ್ಮಿನಾಗರಾಜ್, ಸುಷ್ಮಾಪಾಟೀಲ್, ಚಂದ್ರಶೇಖರ್, ಮೃತ್ಯುಂಜಯ ಪಾಟೀಲ್ ಇನ್ನಿತರರಿದ್ದರು.

## ಜಿಎಂಐಟಿ ವಿದ್ಯಾರ್ಥಿಗಳಿಗೆ 11 ಚಿನ್ನ, 27 ಬೆಳ್ಳಿ ಪದಕ ಪ್ರದಾನ

ದಾವಣಗೆರೆ, ಜು.29- ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜಿ.ಮಲ್ಲಿಕಾರ್ಜುನಪ್ಪ ಸ್ಮರಣಾರ್ಥ, ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದ ಆಧಾರದ ಮೇಲೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 11 ವಿದ್ಯಾರ್ಥಿಗಳು ಶೇಕಡ 90ಕ್ಕೂ ಹೆಚ್ಚು ಅಂಕ ಗಳಿಸಿ 12 ಬಂಗಾರದ ಪದಕಗಳನ್ನು ಪಡೆದಿದ್ದಾರೆ ಮತ್ತು 27 ವಿದ್ಯಾರ್ಥಿಗಳು ಬೆಳ್ಳಿಯ ಪದಕಗಳನ್ನು ಪಡೆದಿದ್ದಾರೆ.

ಕಾಲೇಜಿನ ವಾರ್ಷಿಕೋತ್ಸವ 'ಮಲ್ಲಿಕಾ 22' ಸಮಾರೋಪ ಸಮಾರಂಭದಲ್ಲಿ ಸದಸ್ಯ ಡಾ ಜಿ.ಎಂ. ಸಿದ್ದೇಶ್ವರ ಪದಕಗಳನ್ನು ವಿತರಿಸಿದರು.

ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಾದ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ಇಂಜಿನಿಯರಿಂಗ್ ವಿಭಾಗದಿಂದ ತೇಜಸ್ವಿನಿ ಎಂ, ಸುಪ್ರಿಯಾ ಆರ್, ರಘುವೀರ್ ಪಿ. ಮೆಹರ್ವಾಡೆ, ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಿಂದ ದಿವ್ಯ ರಮೇಶ್ ಭಟ್, ವರುಣ್ ಎಸ್. ಪಾಟೀಲ್, ಸುಷ್ಮಾ ಬಿ.ಸಿ. ನವ ಪ್ರೀತಮ್, ನಿರ್ಮಲ ಅನಂತ್ ಹೆಗಡೆ, ಬಯೋಟೆಕ್ನಾಲಜಿ ಇಂಜಿನಿಯರಿಂಗ್ ವಿಭಾಗದ ಮೋನಿಷಾ ಜಿ ( ಎರಡು ಚಿನ್ನದ ಪದಕಗಳು), ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಿಂದ ಚೈತ್ರ ಆರ್, ಸಿವಿಲ್ ಇಂಜಿನಿಯರಿಂಗ್ ವಿಭಾಗದಿಂದ ಪೂಜಾ ಎಸ್. ಸೋಮನಹಳ್ಳಿ ಇವರುಗಳು ಚಿನ್ನದ ಪದಕ ಪಡೆದಿರುತ್ತಾರೆ.

## ತಂಬಾಕು ಉತ್ಪನ್ನಗಳ ಮೇಲೆ ಹೊಸ ಚಿತ್ರ

ನವದೆಹಲಿ, ಜು. 29 – ಬರುವ ಡಿಸೆಂಬರ್ 1ರಿಂದ ತಂಬಾಕು ಉತ್ಪನ್ನಗಳ ಮೇಲೆ ಹೊಸ ಚಿತ್ರವನ್ನು ಅಳವಡಿಸಲಾಗುವುದು. ಇದರ ಮೇಲೆ 'ತಂಬಾಕಿನಿಂದ ನೋವು ತುಂಬಿದ ಸಾವಾಗುತ್ತದೆ' ಎಂಬ ಎಚ್ಚರಿಕೆಯ ಸಂದೇಶ ಇರಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹೇಳಿದ್ದಾರೆ. ಬರುವ ಡಿಸೆಂಬರ್ 1ರಿಂದ ಒಂದು ವರ್ಷದವರೆಗೆ ಈ ಚಿತ್ರ ಅಳವಡಿಕೆಯಾಗಲಿದೆ. 19 ಭಾಷೆಗಳಲ್ಲಿ ಎಚ್ಚರಿಕೆಯ ಸಂದೇಶ ನೀಡಲಾಗುವುದು.

# ಸರ್ಕಾರಿ ಶಾಲೆ, ಕಾಲೇಜುಗಳ ಮುಚ್ಚುವ ಕ್ರಮಕ್ಕೆ ತೀವ್ರ ಖಂಡನೆ



ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳಿಂದ ನಗರದಲ್ಲಿ ಪ್ರತಿಭಟನೆ

ದಾವಣಗೆರೆ, ಜು.29- ಒತ್ತಾಯ ಪೂರ್ವಕ ಎನ್‌ಇಪಿ, ಸರ್ಕಾರಿ ಶಾಲೆ, ಕಾಲೇಜುಗಳ ಮುಚ್ಚುವ ಸರ್ಕಾರದ ಕ್ರಮವನ್ನು ಖಂಡಿಸಿ ನಗರದಲ್ಲಿ ಇಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ ಜಿಲ್ಲಾ ಸಮಿತಿ (ಎಐಡಿಎಸ್‌ಓ) ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮಾನವತಾವಾದಿ ಈಶ್ವರಚಂದ್ರ ವಿದ್ಯಾ ಸಾಗರ್ ಅವರ ಸ್ಮರಣ ದಿನದ ಅಂಗ ವಾಗಿ ರಾಜ್ಯವ್ಯಾಪಿ ಸಾರ್ವಜನಿಕ ಶಿಕ್ಷಣ ಉಳಿಸಿ ದಿನದ ಪ್ರಯುಕ್ತ ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಸಮಿತಿ ಪದಾಧಿಕಾರಿಗಳು, ವಿದ್ಯಾರ್ಥಿಗಳು ಸರ್ಕಾರಿ ಶಾಲೆ ಮುಚ್ಚುವ ಕ್ರಮಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ಹಿರಿಯ ಸಾಹಿತಿ ಪ್ರೊ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಶಿಕ್ಷಣ ಸಾರ್ವತ್ರಿಕವಾಗಬೇಕು, ಹುಟ್ಟುವ ಪ್ರತಿ ಮಗುವಿಗೂ ಶಿಕ್ಷಣದ ಬಾಗಿಲುಗಳು ತೆರೆದಿರಬೇಕು ಎಂಬುದು ಎಲ್ಲರ ಆಶಯ. ಅವರ ಉತ್ತರಾಧಿಕಾರಿಗಳಾಗಿ ಇಂದು ನಾವು ಜನರಿಗಾಗಿ ಇರುವ ಸರ್ಕಾರಿ ಸಂಸ್ಥೆಗಳನ್ನು ಮುಚ್ಚುವ ಹಕ್ಕು ಸರ್ಕಾರಕ್ಕೆ ಇಲ್ಲ. ನಮ್ಮ ಶಾಲೆ ನಮ್ಮ ಹಕ್ಕು. ಅದನ್ನು ನಮ್ಮಿಂದ ಕಸಿಯಲು ನಾವು ಬಿಡುವುದಿಲ್ಲ ಎಂಬ ಸಂಕಲ್ಪ ತೊಡಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ಮಾತನಾಡಿ, ಈ ವರ್ಷ ರಾಜ್ಯದಲ್ಲಿ 13,800 ಸರ್ಕಾರಿ ಶಾಲೆ, ಕಾಲೇಜುಗಳನ್ನು ಮುಚ್ಚುತ್ತೇವೆ ಎಂದು ಸರ್ಕಾರ ಹೇಳಿದೆ. ಈ ಸುದ್ದಿಯಿಂದ ರಾಜ್ಯದ ಲಕ್ಷಾಂತರ ಬಡ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಬರ ಸಿಡಿಲು ಬಡಿದಂತಾಗಿದೆ. ಸರ್ಕಾರದ ನಿರ್ಧಾರದಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳು ಶಾಶ್ವತವಾಗಿ ಶಿಕ್ಷಣದಿಂದ ದೂರ ಉಳಿಯುವಂತಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುನೀತ್ ಕುಮಾರ್ ಮಾತನಾಡಿ, ಇಂದಿನ ಲಾಭಕೋರ ವ್ಯವಸ್ಥೆಯ ಅಡಿಯಲ್ಲಿ ಸಿಲುಕಿ ಶಿಕ್ಷಣ ಕ್ಷೇತ್ರ ಕಮರಿ ಹೋಗುತ್ತಿದೆ. ಸರ್ಕಾರದ ನೀತಿಗಳು ಶಿಕ್ಷಣವನ್ನು ಮತ್ತಷ್ಟು ದುಬಾರಿಗೊಳಿಸುವತ್ತ, ಖಾಸಗೀಕರಣಗೊಳಿಸುವತ್ತ ರೂಪುಗೊಳ್ಳುತ್ತಿವೆ. ಅಂತಹ ಒಂದು ನೀತಿ ಈಗ ಅತ್ಯಂತ ಚರ್ಚೆಗೆ ಹಾಗೂ ವಿವಾದಕ್ಕೆ ತುತ್ತಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಹಲವು ಶಿಕ್ಷಣ ವಿರೋಧಿ, ಬಡ ಜನ ವಿರೋಧಿ ಪ್ರತಿಪಾದನೆಗಳು ಅಡಕವಾಗಿವೆ. ಕಡಿಮೆ ದಾಖಲಾತಿ ಇರುವ ಸರ್ಕಾರಿ ಶಾಲೆಗಳನ್ನು ಮುಚ್ಚಬೇಕು ಎನ್ನುವುದು ಇದೆ. ಕರ್ನಾಟಕದಲ್ಲಿ ಅಂತಹ 13,800 ಸರ್ಕಾರಿ ಶಾಲೆಗಳ ಮುಚ್ಚುವಿಕೆಯು ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ನಡೆಯುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಬಿ. ಕಾವ್ಯ, ಜಿಲ್ಲಾ ಸೆಕ್ರೆಟರಿ ಸದಸ್ಯರಾದ ಜಿ. ಪುಷ್ಪ, ಅಭಿಷೇಕ್, ಆಂಜನೇಯ ಸೇರಿದಂತೆ, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಮುಂದಿನ ತಿಂಗಳು ಆಜಾದಿ ಸ್ಯಾಟ್ ಉಪಗ್ರಹ ಉಡಾವಣೆ

**750 ವಿದ್ಯಾರ್ಥಿನಿಯರು ರೂಪಿಸಿರುವ ಉಪಗ್ರಹ**

ನವದೆಹಲಿ, ಜು. 29- ದೇಶಾದ್ಯಂತದ 75 ಶಾಲೆಗಳ 750 ವಿದ್ಯಾರ್ಥಿನಿಯರು ರೂಪಿಸಿರುವ ಆಜಾದಿ ಸ್ಯಾಟ್ ಉಪಗ್ರಹ ಮುಂದಿನ ತಿಂಗಳು ಉಡಾವಣೆಗೊಳ್ಳಲಿದೆ. ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋದ ಸ್ಮಾಲ್ ಸೆಟಲೈಟ್ ಲಾಂಚ್ ವೆಹಿಕಲ್ (ಎಸ್.ಎಸ್.ಎಲ್.ವಿ.) ಮೊದಲ ಉಡಾವಣೆ ಇದಾಗಲಿದೆ.

ಎಂಟು ಕೆಜಿ ತೂಕದ ಉಪಗ್ರಹ, 75 ಪ್ರಯೋಗಗಳನ್ನು ಮಾಡಲಿದೆ. ಈ ಉಪಗ್ರಹ ಆರು ತಿಂಗಳ ಅವಧಿಯದ್ದಾಗಿ ರಲಿದೆ. ಕೆಳ ಕಕ್ಷೆಯಲ್ಲಿ ಉಪಗ್ರಹಗಳ ಉಡಾವಣೆ ಮಾಡಲು ಇಸ್ರೋ ಸಂಸ್ಥೆಯು ಎಸ್.ಎಸ್.ಎಲ್.ವಿ. ಅಭಿವೃದ್ಧಿಪಡಿಸಿದೆ. 500 ಕೆಜಿಗೂ ಕಡಿಮೆ ತೂಕದ ಉಪಗ್ರಹಗಳನ್ನು ಈ ಮೂಲಕ ಉಡಾವಣೆ ಮಾಡಲಾಗುವುದು. ಭೂ ವೀಕ್ಷಣೆ ಹಾಗೂ ದುರ್ಗಮ ಪ್ರದೇಶಗಳಲ್ಲಿ ಅಂತರ್ಜಾಲ ಸೇವೆಗೆ ಸಂಬಂಧಿಸಿದಂತೆ ಈ ಉಪಗ್ರಹಗಳು ನೆರವಾಗಲಿವೆ.

ಎಸ್.ಎಸ್.ಎಲ್.ವಿ. ರಾಕೆಟ್‌ಗಳನ್ನು ವಾರದಲ್ಲೇ ಉತ್ಪಾದಿಸಬಹುದು. ಇದು ಹೆಚ್ಚಾಗುತ್ತಿರುವ ಬಾಹ್ಯಾಕಾಶ ವಲಯದ ಉಪಕರಣಗಳ ಬೇಡಿಕೆ ಈಡೇರಿಸಲು ನೆರವಾಗಲಿದೆ.

## ಹಳೇ ವಿದ್ಯಾರ್ಥಿಗಳಿಂದ ಶಿಕ್ಷಕರಿಗೆ ಸನ್ಮಾನ



ದಾವಣಗೆರೆ, ಜು.29- ಸರ್ಕಾರಿ ಬಾಲಕರ ಪ್ರೌಢಶಾಲೆಯ ಉಪನ್ಯಾಸಕರುಗಳಿಗೆ ಗುರು ಪೂರ್ಣಿಮೆ ಅಂಗವಾಗಿ 1998 ರಿಂದ 2001ರ ವರೆಗೆ ವ್ಯಾಸಂಗ ಮಾಡಿದ ಹಳೆಯ ವಿದ್ಯಾರ್ಥಿಗಳಿಂದ ಈಚೆಗೆ ನಗರದ ಪಂಚಮಿ ಪರಿವಾರ್ ಹೋಟೆಲ್‌ನಲ್ಲಿ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಉಪ ಪ್ರಾಂಶುಪಾಲ ಕೆ. ಶಿವಪ್ಪ, ಎ.ಡಿ. ಶಿವಪ್ಪ, ಎಮ್.ಎಸ್. ಬಕ್ಕೇಶ್, ಆರ್. ರಂಗಪ್ಪ, ಆರ್.ಎಸ್. ಜಗದೀಶ್, ಎಸ್. ವಾಣಿಶ್ರೀ ಉಪನ್ಯಾಸಕರುಗಳಿಗೆ ಸನ್ಮಾನಿಸಲಾಯಿತು.

ವಿದ್ಯಾರ್ಥಿಗಳಾದ ಎಸ್. ರಾಘವೇಂದ್ರ, ಹೆಚ್.ಜಿ. ಸನಾವುಲ್ಲಾ, ಕೆ.ಎಂ. ಪ್ರೇಮನಾಥಯ್ಯ, ಎಂ. ತಿಪ್ಪೇಸ್ವಾಮಿ, ಎನ್. ನಾಗೇಂದ್ರ, ಎಸ್.ಎ. ಬಸವರಾಜ್, ಶಂಶುದ್ದೀನ್, ಎಂ. ಮಹಾಂತೇಶ್ ನಾಯ್ಕ್, ಡಿ.ಕೆ. ಮಂಜುನಾಥ್ ರೆಡ್ಡಿ ಪಾಲ್ಗೊಂಡಿದ್ದರು.

## ರಾಷ್ಟ್ರೀಯ ತನಿಖಾ ದಳ

**(1ನೇ ಪುಟದಿಂದ)** ಕೊಲೆಗಳಾಗಿರುವುದು ಜನರಲ್ಲಿ ಆತಂಕವನ್ನು ಮೂಡಿಸಿರುವುದು ಸಹಜ. ಸಮಾಜದಲ್ಲಿ ಇಂತಹ ಘಟನೆಗಳು ನಡೆಯಬಾರದು. ಸಮಾಜಘಾತುಕ ಶಕ್ತಿಗಳಿಗೆ ಕುಮ್ಮಕ್ಕು ನೀಡಲಾಗಿದೆ. ರಾಜಕೀಯ ಪ್ರೇರಣೆ ಕೂಡ ಇದರ ಹಿಂದಿದೆ ಎಂದವರು ಹೇಳಿದರು.

ಮಸೂದ್ ಕೊಲೆಯ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ. ಇನ್ನೆರಡು ಕೊಲೆ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗುತ್ತಿದೆ. ಸರ್ಕಾರ ಈ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುತ್ತಿದೆ ಎಂದು ಮುಖ್ಯಮಂತ್ರಿ ಹೇಳಿದರು. ಅದರ ಹಿಂದೆ ದೊಡ್ಡ ಸಂಘಟನೆಗಳಿವೆ. ಇದು ಕೇವಲ ಕೊಲೆ ಎಂದು ಪರಿಗಣಿಸಲಾಗುತ್ತಿಲ್ಲ. ಇದೊಂದು ಯೋಜನಾಬದ್ಧ ದುಷ್ಕೃತ್ಯವಾಗಿದ್ದು, ಇದರ ಹಿಂದಿರುವ ಸಮಾಜ ಘಾತುಕ ಸಂಘಟನೆಗಳನ್ನು ಸದೆಬಡೆಯುವ ಮಹತ್ವದ ಕೆಲಸವನ್ನು ಮಾಡಲಾಗುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಈ ಕ್ರಮಗಳು ಜನರಿಗೆ ವೇದ್ಯವಾಗಲಿವೆ ಎಂದರು.

# ಸಿದ್ದರಾಮಯ್ಯನವರ ಜನ್ಮದಿನಕ್ಕೆ ಹರಿಹರ ಕ್ಷೇತ್ರದಿಂದ 25 ಸಾವಿರ ಜನ



ಹರಿಹರ, ಜು.29- ಆಗಸ್ಟ್ 3 ರಂದು ದಾವಣಗೆರೆಯಲ್ಲಿ ಹಮ್ಮಿಕೊಂಡಿರುವ ಮಾಜಿ ಸಿಎಂ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನವರ 75ನೇ ವರ್ಷದ ಜನ್ಮ ದಿನದ ಅಮೃತ ಮಹೋತ್ಸವಕ್ಕೆ ಹರಿಹರ ತಾಲ್ಲೂಕಿನಿಂದ 25 ಸಾವಿರ ಜನ ಭಾಗವಹಿಸಲಿದ್ದಾರೆ ಎಂದು ಶಾಸಕ ಎಸ್.ರಾಮಪ್ಪ ಹೇಳಿದರು.

ಬುಧವಾರ ಇಲ್ಲಿನ ವಿದ್ಯಾನಗರದಲ್ಲಿರುವ ಐರಣಿ ಹೊಳೆಮಠದ ಸಮುದಾಯ ಭವನದಲ್ಲಿ ಕರೆದಿದ್ದ ಸಿದ್ದರಾಮಯ್ಯನವರ ಜನ್ಮ ದಿನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂದು ದಾವಣಗೆರೆಗೆ ಬರಲು ಹರಿಹರ ನಗರ, ಮಲೇಬೆನ್ನೂರು ಪಟ್ಟಣ ಸೇರಿದಂತೆ ಎಲ್ಲಾ ಹಳ್ಳಿಗಳಿಗೂ ಬಸ್ ಸೌಲಭ್ಯ ಕಲ್ಪಿಸಲಾಗುವುದು.

ಅಲ್ಲದೇ, ಬಹಳಷ್ಟು ಜನ ಸ್ವಂತ ವಾಹನಗಳಲ್ಲಿ ಬರುವುದಾಗಿ ತಿಳಿಸಿದ್ದಾರೆ. ಇನ್ನಷ್ಟು ಜನ ಪಾದಯಾತ್ರೆ ಮೂಲಕ ಸಿದ್ದರಾಮಯ್ಯನವರ ಸಮಾರಂಭದಲ್ಲಿ ಪಾಲ್ಗೊಳ್ಳುವುದಾಗಿ ಹೇಳಿದ್ದಾರೆ.

ಸಿದ್ದರಾಮಯ್ಯನವರು ಸಿಎಂ ಆಗಿದ್ದಾಗ ಅವರು ಜಾರಿಗೆ ತಂದಿರುವ ಯೋಜನೆಗಳೇ ಇಂದಿಗೂ ಹಚ್ಚ ಹಸಿರಾಗಿದ್ದು, ಜನರ ಹೃದಯದಲ್ಲಿವೆ. ಹಾಗಾಗಿ ಜನರೇ ಸ್ವಯಂ ಪ್ರೇರಿತರಾಗಿ ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಸುಮಾರು 10 ಲಕ್ಷ ಜನ ಅಂದು ನಾಡಿನ ಮೂಲೆ ಮೂಲೆಗಳಿಂದ ಆಗಮಿಸಲಿದ್ದಾರೆ.

> **ಈ ಸಮಾರಂಭವು ಬಿಜೆಪಿ ನಾಯಕರಿಗೆ ನಡುಕ ಹುಟ್ಟಿಸಿದ್ದು, ಮುಂಬರುವ ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಆಗಲಿದೆ.**
>
> **- ಎಸ್.ರಾಮಪ್ಪ, ಶಾಸಕ, ಹರಿಹರ**

ಕೆಪಿಸಿಸಿ ಸದಸ್ಯ ಬಿ.ರೇವಣಸಿದ್ದಪ್ಪ, ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಮುಖಂಡರಾದ ಎಂ. ಬಸಪ್ಪ, ಕೃಷ್ಣಸಾ ಭೂತೆ, ಶಂಕರ್ ಖಟಾವ್‌ಕರ್, ದೋಸ್ತಾನ ಖಲೀಲ್, ಕುಂಬಳೂರು ವಿರೂಪಾಕ್ಷಪ್ಪ, ಕೆ. ಜಡಿಯಪ್ಪ, ಜಿ.ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ನಂದಿಗಾವಿ ಶ್ರೀನಿವಾಸ್, ಕುಣೆಬೆಳಕೆರೆ ದೇವೇಂದ್ರಪ್ಪ, ಟಿ.ಜೆ.ಮುರುಗೇಶ್, ನಗರಸಭೆ ಅಧ್ಯಕ್ಷೆ ಶಾಹೀನಾ ಬಾನು ದಾದಾಪೀರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಹನುಮಂತಪ್ಪ, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಪಾರ್ವತಿ, ವಿದ್ಯಾ ಸವಿತಾನಾಯ್ಕ, ಮುಖಂಡರಾದ ಸಿಗ್ಬತ್‌ವುಲ್ಲಾ, ಎಜಾಜ್, ಅಶೋಕ್ ಮೇಷ್ಟ್ರು, ಹಳ್ಳಿಹಾಳ್ ವೀರನಗೌಡ, ರುಸ್ತುಂ, ಕೆ.ಪಿ.ಗಂಗಾಧರ್, ಎ.ಆರೀಫ್ ಅಲಿ, ಭೋವಿ ಶಿವು ಮತ್ತಿತರರು ಭಾಗವಹಿಸಿದ್ದರು.

## ಸಿರಿಗೆರೆಯಲ್ಲಿ ಇಂದಿನಿಂದ ರಂಗ ತರಬೇತಿ

ತರಳಬಾಳು ಕಲಾಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಇಂದಿನಿಂದ 16 ದಿನಗಳ ಕಾಲ ರಂಗ ತರಬೇತಿ ಶಿಬಿರ ನಡೆಯಲಿದೆ. ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ವಿದ್ಯಾಸಂಸ್ಥೆಯ ಆಯ್ದ ಶಿಕ್ಷಕರು ಮತ್ತು ಸ್ಥಳೀಯ ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಸಿದ್ಧಲಿಂಗೇಶ್ವರ ದೀಕ್ಷಾ ಮಂಟಪದಲ್ಲಿ ತರಳಬಾಳು ವಿದ್ಯಾಸಂಸ್ಥೆ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಬಿ. ರಂಗನಾಥ್ ಶಿಬಿರವನ್ನು ಉದ್ಘಾಟಿಸುವರು. ಆಡಳಿತಾಧಿಕಾರಿ ಡಾ.ಹೆಚ್.ವಿ. ವಾಮದೇವಪ್ಪ, ಶಿಬಿರದ ನಿರ್ದೇಶಕರಾದ ರಂಗ ನಿರ್ದೇಶಕ ಕೃಷ್ಣಮೂರ್ತಿ ಕವತ್ತಾರ್ ಭಾಗವಹಿಸಲಿದ್ದು, ಕಲಾ ಸಂಘದ ಅಧ್ಯಕ್ಷ ರಾಜಶೇಖರ ಅಧ್ಯಕ್ಷತೆ ವಹಿಸಲಿದ್ದಾರೆ.

## ನ್ಯೂನತೆಗಳನ್ನು ಸರಿಪಡಿಸಲು ಸಿಟಿ ಬ್ಯಾಂಕಿಗೆ ಸೂಚನೆ

ದಾವಣಗೆರೆ,ಜು.29- ಕರ್ನಾಟಕ ಸಹಕಾರ ಸಂಘಗಳ ನಿಯಮಗಳು ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ವಾರ್ಷಿಕ ಮಹಾಸಭಾ ನಡೆಸುವಂತೆ ಸಿಟಿ ಕೋ-ಆಪರೇಟಿವ್ ಬ್ಯಾಂಕಿಗೆ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಸೂಚಿಸಿದ್ದಾರೆ.

ಪ್ರಸಾದ್ ಬಿ. ಗೌಡ ಅವರು ನೀಡಿದ್ದ ದೂರನ್ನು ಪರಿಶೀಲಿಸಿದ ಉಪ ನಿಬಂಧಕರು ಈ ಸೂಚನೆ ನೀಡಿದ್ದಾರೆ.

# ಜಿಡಿಸಿ ತರಬೇತಿ ಪಡೆದವರಿಗೆ ಉದ್ಯೋಗದಲ್ಲಿ ಶೇ.10 ರಷ್ಟು ಮೀಸಲು

## ಮಲೇಬೆನ್ನೂರಿನಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ



ಮಲೇಬೆನ್ನೂರು, ಜು.29- ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳು ಕಡ್ಡಾಯವಾಗಿ ಜಿಡಿಸಿ ತರಬೇತಿ ಪಡೆದುಕೊಳ್ಳುವುದು ಸೂಕ್ತ ಎಂದು ಜಿಲ್ಲಾ ಸಹಕಾರಿ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ ಹೇಳಿದರು.

ಅವರು, ಶುಕ್ರವಾರ ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಜಿಡಿಸಿ ತರಬೇತಿ ಮಾಡಿದವರಿಗೆ ಉದ್ಯೋಗದಲ್ಲಿ ಶೇ.10 ರಷ್ಟು ಮೀಸಲು ನೀಡಲಾಗುವುದೆಂದು ಸಹಕಾರ ಸಚಿವರು ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಜಿಡಿಸಿ ತರಬೇತಿ ಪಡೆಯಲು ಇಚ್ಛಿಸುವವರು ನಮ್ಮ ಒಕ್ಕೂಟವನ್ನು ಸಂಪರ್ಕಿಸಿದರೆ, ಶಿವಮೊಗ್ಗದಲ್ಲಿ ತರಬೇತಿ ಕೇಂದ್ರಕ್ಕೆ ಅಗತ್ಯ ಸೌಲಭ್ಯದೊಂದಿಗೆ ಕಳುಹಿಸಲಾಗುವುದು ಎಂದು ರಾಜಣ್ಣ ತಿಳಿಸಿದರು.

ಸಹಕಾರ ಬ್ಯಾಂಕ್, ವಿವಿಧ ರೀತಿಯ ಸಹಕಾರ ಸಂಘಗಳು, ಪಿಎಸಿಎಸ್, ಮಿಲ್ಕ್ ಸೊಸೈಟಿಗಳ ಲಾಭಾಂಶದಲ್ಲಿ ಶೇ.2 ರಷ್ಟು ಹಣವನ್ನು ಶಿಕ್ಷಣ ನಿಧಿಗೆ ಪಡೆದು ಆ ಹಣವನ್ನು ರಾಜ್ಯ ಸಹಕಾರ ಮಹಾಮಂಡಳಕ್ಕೆ ಕಳುಹಿಸಲಾಗುವುದು. ನಂತರ ಅವರು ಆ ಹಣವನ್ನು ಸಹಕಾರಿ ಕ್ಷೇತ್ರದ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಗೆ ತರಬೇತಿ ನೀಡಲು ನೀಡುತ್ತಾರೆಂದು ಅವರು ಹೇಳಿದರು.

ಇನ್ನೋರ್ವ ಸನ್ಮಾನಿತರಾದ ದಾವಣಗೆರೆ ಜನತಾ ಬಜಾರ್ ನಿರ್ದೇಶಕ ಪಿ.ಹೆಚ್.ಶಿವಕುಮಾರ್ ಮಾತನಾಡಿದರು.

ಹರಿಹರ ಟಿಎಪಿಸಿಎಂಎಸ್ ಅಧ್ಯಕ್ಷ ಸಿ.ಬಿ.ಅಬ್ದುಲ್ ಹಾದಿ ಅವರನ್ನು ಈ ವೇಳೆ ಸನ್ಮಾನಿಸಲಾಯಿತು. ಪಿಎಸಿಎಸ್ ನಿರ್ದೇಶಕರಾದ ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಕೆ.ಪಿ.ಗಂಗಾಧರ್, ಪಿ.ಆರ್.ಕುಮಾರ್, ಎಂ.ಬಿ.ಗುಲ್ಜಾರ್ ಸಾಬ್, ಯುನೂಸ್, ಶ್ರೀಮತಿ ಚಂದ್ರಮ್ಮ, ಕೆ.ಜಿ. ಪರಮೇಶ್ವರಪ್ಪ, ಸಿಇಓ ಸಿದ್ದಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಆದಾಪುರ ವೀರಭದ್ರಪ್ಪ, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಮಾಜಿದ್, ಭೋವಿ ಶಿವು, ಸಾಬೀರ್ ಅಲಿ, ಪಿ.ಆರ್.ರಾಜು, ಎ.ಕೆ.ಲೋಕೇಶ್, ಮುಖಂಡರಾದ ಭೋವಿಕುಮಾರ್, ಆದಾಪುರದ ಭೀಮಪ್ಪ, ಆದಾಪುರದ ವೀರೇಶ್, ಭೋವಿ ಮಂಜಣ್ಣ, ಜಿ.ಪಿ.ಹನುಮಗೌಡ ಮತ್ತಿತರರು ಭಾಗವಹಿಸಿದ್ದರು.

# ತುಮಕೂರು-ದಾವಣಗೆರೆ ಸೇರಿದಂತೆ, 9 ರೈಲ್ವೆ ಮಾರ್ಗಗಳ ನಿರ್ಮಾಣ ಕಾರ್ಯ 2 ವರ್ಷಗಳಲ್ಲಿ ಪೂರ್ಣ

ಬೆಂಗಳೂರು, ಜು. 29 - ರಾಜ್ಯದಲ್ಲಿ ಸದ್ಯಕ್ಕೆ ಒಂಭತ್ತು ರೈಲ್ವೇ ಮಾರ್ಗಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ಮುಂದಿನ 2 ವರ್ಷಗಳಲ್ಲಿ ಇದು ಪೂರ್ಣವಾಗುವ ನಿರೀಕ್ಷೆ ಇದೆ ಎಂದು ಮೂಲ ಸೌಕರ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಒಂಭತ್ತು ಯೋಜನೆಗಳ ಕಾಮಗಾರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವೇ ಭೂಸ್ವಾಧೀನ ಕಾರ್ಯ ನಡೆಸಿದ್ದು ಕಾಮಗಾರಿಗಾಗಿ 1666 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ ಎಂದರು. ಈ ವರ್ಷ ಸದರಿ ಯೋಜನೆಗಳಿಗೆ ಐನೂರು ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದು, ತ್ವರಿತಗತಿಯಲ್ಲಿ ಕಾಮಗಾರಿ ನಡೆಯುತ್ತಿದೆ ಎಂದು ಹೇಳಿದರು.

ತುಮಕೂರು-ದಾವಣಗೆರೆ ಮಾರ್ಗಕ್ಕೆ 1801 ಕೋಟಿ ರೂ., ಶಿವಮೊಗ್ಗ-ಶಿಕಾರಿಪುರ- ರಾಣೇಬೆನ್ನೂರು ಮಾರ್ಗಕ್ಕೆ 1200 ಕೋಟಿ, ಬೇಲೂರು-ಹಾಸನ ಮಾರ್ಗಕ್ಕೆ 462 ಕೋಟಿ ರೂ., ಧಾರವಾಡ-ಬೆಳಗಾವಿ ಮಾರ್ಗಕ್ಕೆ 927 ಕೋಟಿ ರೂಪಾಯಿ ವೆಚ್ಚವಾಗಲಿದ್ದು, ಯೋಜನೆಯ ಶೇ.50ರಷ್ಟು ಹಣವನ್ನು ಕೇಂದ್ರ ಸರ್ಕಾರ, ಶೇ. 50 ರಷ್ಟು ಹಣವನ್ನು ರಾಜ್ಯ ಸರ್ಕಾರ ಭರಿಸಲಿವೆ ಎಂದು ಹೇಳಿದರು.

ಮುನಿರಾಬಾದ್-ಮೆಹಬೂಬ್ ನಗರ ಯೋಜನೆಗೆ 1350 ಕೋಟಿ ವೆಚ್ಚವಾಗಲಿದ್ದು, ತುಮಕೂರು - ರಾಯದುರ್ಗ ನಡುವಣ ರೈಲ್ವೇ ಯೋಜನೆಗೆ 479 ಕೋಟಿ ರೂ., ಚಿಕ್ಕಮಗಳೂರು- ಬೇಲೂರು ನಡುವಣ ರೈಲ್ವೇ ಕಾಮಗಾರಿಗೆ 657 ಕೋಟಿ ರೂ., ಬಾಗಲಕೋಟೆ-ಕುಡುಚಿ ಮಾರ್ಗಕ್ಕೆ 816 ಕೋಟಿ ರೂ., ಗದಗ-ವಾಡಿ ಮಾರ್ಗಕ್ಕೆ 1922 ಕೋಟಿ ರೂ. ವೆಚ್ಚವಾಗಲಿದೆ ಎಂದರು. ರೈಲ್ವೇ ಯೋಜನೆಗಳಿಗೆ ಸಂಬಂಧಿಸಿದಂತೆ ಸಂಚಾರ ಕಾರ್ಯ ಸುಗಮವಾಗಿ ನಡೆಯಲು ಮೇಲುಸೇತುವೆ-ಕೆಳಸೇತುವೆಗಳ ನಿರ್ಮಾಣ ಕಾರ್ಯಕ್ಕೆ ರಾಜ್ಯ ಸರ್ಕಾರ 191.98 ಕೋಟಿ ರೂಪಾಯಿಗಳನ್ನು ಒದಗಿಸಿದೆ ಎಂದು ಹೇಳಿದರು.

ಬೆಂಗಳೂರಿನ ಯಶವಂತಪುರ-ಚನ್ನಸಂದ್ರ ಮತ್ತು ಬೈಯಪ್ಪನ ಹಳ್ಳಿ-ಹೊಸೂರು ನಡುವಿನ ಮಾರ್ಗಗಳು ಏಕಪಥವಾಗಿದ್ದು ಯಶವಂತಪುರ ಹಾಗೂ ಬೆಂಗಳೂರು ನಗರದಿಂದ ಹೆಚ್ಚುವರಿ ರೈಲು ಸೇವೆಗಳನ್ನು ಆರಂಭಿಸಲು ಅಡ್ಡಿಯಾಗಿದೆ ಎಂದವರು ಹೇಳಿದರು. ಈ ಸಮಸ್ಯೆಯನ್ನು ಪರಿಹರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲಾ 50ರಷ್ಟು ವೆಚ್ಚವನ್ನು ಭರಿಸಿ ದ್ವಿಪಥೀಕರಣ ನಿರ್ಮಾಣ ಕಾರ್ಯವನ್ನು ಅನುಷ್ಠಾನಗೊಳಿಸುತ್ತಿರುವುದಾಗಿ ಹೇಳಿದರು.


ಸವಿ ನೆನಪು



ದಿ|| ಪೈಲ್ವಾನ್ ಹರಪನಹಳ್ಳಿ ಚಂದ್ರಪ್ಪನವರು

ಜನನ : 05-01-1944 ಮರಣ : 30-07-2012

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.

ಸದಾ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಹನುಮಕ್ಕ ಮತ್ತು ಕುಟುಂಬ ವರ್ಗ


# ಪ್ರವೀಣ್ ನೆಟ್ಟಾರು ಹತ್ಯೆಯ ಆರೋಪಿಗಳಿಗೆ ಉಗ್ರ ಶಿಕ್ಷೆಗೆ ಆಗ್ರಹ

**ಅಖಿಲ ಭಾರತ ಹಿಂದೂ ಮಹಾಸಭಾದಿಂದ ನಗರದಲ್ಲಿ ಪ್ರತಿಭಟನೆ**



ದಾವಣಗೆರೆ, ಜು.29- ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಕೊಲೆ ಖಂಡಿಸಿ ಅಖಿಲ ಭಾರತ ಹಿಂದೂ ಮಹಾಸಭಾದಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಮಹಾ ಸಭಾದ ಕಾರ್ಯಕರ್ತರು, ಉಪ ವಿಭಾಗಾಧಿಕಾರಿ ಗಳ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಉಪವಿಭಾಗಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ಬಿಜೆಪಿ ಕೇವಲ ರಾಜಕೀಯ ಪಕ್ಷವಲ್ಲ. ಪಕ್ಷವು ತನ್ನದೇ ಆದ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸ್ಥಾಪಿತವಾದ ಸಂಘಟನೆ. ಸೈದ್ಧಾಂತಿಕ ವಿಚಾರ, ನಿಲುವಿಗಾಗಿ ಅನೇಕ ಕಾರ್ಯಕರ್ತರ ಬಲಿದಾನವಾಗಿದೆ. ತ್ಯಾಗ, ಬಲಿದಾನಗಳ ಮೇಲೆ ಬಿಜೆಪಿ ಪಕ್ಷ ಇಷ್ಟೊಂದು ಬೃಹದಾಕಾರವಾಗಿ ಬೆಳೆದು ನಿಂತು, ಕೇಂದ್ರ ಮತ್ತು ರಾಜ್ಯದಲ್ಲಿ ತನ್ನ ಸರ್ಕಾರವನ್ನು ಸ್ಥಾಪಿಸಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಬಿಜೆಪಿ ಮತ್ತು ಹಿಂದೂ ಕಾರ್ಯಕರ್ತರನ್ನು ಕೆಲವು ಜಿಹಾದಿಗಳು ಹತ್ಯೆ ಮಾಡುತ್ತಿರುವುದನ್ನು ನೋಡಿದರೆ, ಈಗಿನ ಬಿಜೆಪಿ ಸರ್ಕಾರವು ನಮ್ಮ ಹಿರಿಯರು ಹಾಕಿಕೊಟ್ಟ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸ್ಥಾಪಿತವಾದ ಸರ್ಕಾರವೇ ಎಂಬ ಸಂಶಯವು ನಮ್ಮನ್ನು ಕಾಡುತ್ತಿದೆ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಜೆ. ಅರುಣ್ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ಪ್ರವೀಣ್ ನೆಟ್ಟಾರು ಯುವ ಮೋರ್ಚಾದ ಸಕ್ರಿಯ ಕಾರ್ಯಕರ್ತನಾಗಿ ದೇಶ ಸೇವೆಗಾಗಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ ಹುಡುಗ.ಆದರೆ, ಸಮಾಜಕ್ಕಾಗಿ ಪ್ರಾಣ ತೆತ್ತಿರುವುದು ದುರ್ದೈವದ ಸಂಗತಿ. ಅವರ ಹತ್ಯೆಗೆ ಕಾರಣರಾದವರನ್ನು ಬಂಧಿಸಿ, ಉಗ್ರ ಶಿಕ್ಷೆಯನ್ನು ನೀಡಬೇಕೆಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಅರುಣ್ ಕುಮಾರ್ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಉಪಾಧ್ಯಕ್ಷ ಪ್ರಕಾಶ್, ನವೀನ್ ಕುಮಾರ್, ಗಿರಿರಾಜ್, ರಾಮಚಂದ್ರ ಗುರು, ರಮಣ ಪ್ರಸಾದ್, ಸತೀಶ್, ಹೆಚ್.ಎಸ್. ದೊಡ್ಡೇಶ್, ವಿಷ್ಣು, ಮಧು, ರಾಮು, ಗಿರೀಶ್, ಮಂಜು, ಸಿದ್ದೇಶ್, ಮಹಾಂತೇಶ್, ಸಂಜು, ಆದರ್ಶ ಸೇರಿದಂತೆ ಇತರರು ಇದ್ದರು.

# ನೂರಕ್ಕೆ ನೂರು ಅಂಕ ಪಡೆದು ಉತ್ತಮ ಸಾಧಕರಾಗಿ



## ರಾಜನಹಳ್ಳಿ ಸೀತಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ನೂತನ ಕೊಠಡಿಗಳ ಉದ್ಘಾಟನೆಯಲ್ಲಿ ವಿದ್ಯಾರ್ಥಿನಿಯರಿಗೆ ಎಸ್ಸೆಸ್ ಕಿವಿಮಾತು

ದಾವಣಗೆರೆ, ಜು.29- ಕೇವಲ ನೂರರ ಒಳಗಿನ ಅಂಕಗಳಿಗೆ ತೃಪ್ತಿ ಪಟ್ಟುಕೊಳ್ಳದೇ, ನೂರಕ್ಕೆ ನೂರು ಅಂಕ ಪಡೆದು ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡುವಂತೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ವಿದ್ಯಾರ್ಥಿನಿಯರಿಗೆ ಪ್ರೇರಣೆ ನೀಡಿದರು.

ನಗರದ ರಾಜನಹಳ್ಳಿ ಸೀತಮ್ಮ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ 2019-20ನೇ ಸಾಲಿನ ರಾಜ್ಯ ಬಂಡವಾಳ ವೆಚ್ಚದಲ್ಲಿ ನಿರ್ಮಿಸಲಾದ ನೂತನ ಕಟ್ಟಡವನ್ನು ಇಂದು ಉದ್ಘಾಟಿಸಿ, ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ 94 ಸೇರಿದಂತೆ ನೂರರ ಒಳಗಿನ ಅಂಕ ಪಡೆದರೆ ಸಾಲದು. ಪ್ರಸ್ತುತ ದಿನಮಾನಗಳಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಸಾಕಷ್ಟು ಸ್ಪರ್ಧೆ ಇದೆ. ಅಂತಹ ಕಾಲ ಈಗ ಇಲ್ಲ. ಹಾಗಾಗಿ ಆಸಕ್ತಿಯಿಂದ ಓದಿ ನೂರಕ್ಕೆ ನೂರು ಅಂಕ ಪಡೆಯುವಲ್ಲಿ ಪ್ರಯತ್ನ ಮಾಡಬೇಕು. ಆ ಮೂಲಕ ತಮ್ಮ ಉಜ್ವಲ ಭವಿಷ್ಯದ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಬೇಕು. ಗಂಡು ಮಕ್ಕಳಿಗೆ ಕಡಿಮೆ ಇಲ್ಲದಂತೆ ಜೀವನದಲ್ಲಿ ಸಾಧನೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. ಪುರುಷರಿಗಿಂತ ದೊಡ್ಡ ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಅಂತಹ ಸಾಧಕ ಮಹಿಳೆಯರಿಂದ ಸ್ಫೂರ್ತಿ ಪಡೆದು ಜೀವನದಲ್ಲಿ ಉತ್ತಮ ಸ್ಥಾನಮಾನ ಗಳಿಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸಬೇಕು ಎಂದು ವಿದ್ಯಾರ್ಥಿನಿಯರಿಗೆ ಹಿತ ನುಡಿದರು.

ರಾಜನಹಳ್ಳಿ ಮನೆತನದ ಅನೇಕ ಸಂಸ್ಥೆಗಳಿಂದ ಅತ್ಯಂತ ಶ್ರೇಷ್ಠ ದಾನಗಳಾಗಿರುವುದನ್ನು ಮರೆಯಬಾರದು. ವ್ಯಾಸಂಗಕ್ಕೆ ಪೂರಕವಾಗಿ ವಿದ್ಯಾದಾನ ಸಹ ನೀಡುತ್ತಿರುವುದು ಪ್ರಶಂಸನಾರ್ಹ ಎಂದು ತಿಳಿಸಿದರು.

ನಗರ ಪಾಲಿಕೆ ಸದಸ್ಯ ಎಸ್.ಟಿ. ವೀರೇಶ್ ಮಾತನಾಡಿ, ಅನೇಕ ವರ್ಷಗಳಿಂದ ಈ ಸಂಸ್ಥೆಯು ಹಲವಾರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಲು ಸಹಕಾರಿಯಾಗಿದೆ. ಸರ್ಕಾರಿ ಶಾಲಾ-ಕಾಲೇಜುಗಳು ಎಂದರೆ ಮೂಗು ಮುರಿಯುವ ಆಧುನಿಕ ಕಾಲದಲ್ಲಿ ಹಲವಾರು ವಿದ್ಯಾರ್ಥಿಗಳು ಸರ್ಕಾರಿ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಒಂದು ಕಾಲದಲ್ಲಿ ಕಾಟನ್ ಸಿಟಿ ಖ್ಯಾತಿ ಪಡೆದಿದ್ದ ದಾವಣಗೆರೆಯು ಶೈಕ್ಷಣಿಕ ನಗರಿಯಾಗಲು ಶಾಮನೂರು ಶಿವಶಂಕರಪ್ಪ ಅವರ ಕೊಡುಗೆ ಅಪಾರವಾಗಿದೆ ಎಂದು ಶ್ಲಾಘಿಸಿದ ಅವರು, ತ್ಯಾಗ, ಸತತ ಪರಿಶ್ರಮದಿಂದ ಯಶಸ್ಸು ಕಾಣಲು ಸಾಧ್ಯ. ಮನಸ್ಸು, ನಿಶ್ಚಯ ಮಾಡಿದರೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಮಾಜದಲ್ಲಿ ಉತ್ತಮ ಭವಿಷ್ಯ ರೂಪಿಸಿ ಕೊಂಡು ತಂದೆ-ತಾಯಿ ಹಾಗೂ ಗುರುಗಳು ಗೌರವ ಪಡುವ ಹಾಗೆ ಸಾಧನೆ ಮಾಡಬೇಕು ಎಂದು ಹೇಳಿದರು.

ಅಂಕ ಪಡೆದು ಕೇವಲ ಶೈಕ್ಷಣಿಕವಾಗಿ ಪ್ರಗತಿ ಸಾಧಿಸುವುದಷ್ಟೇ ಅಲ್ಲದೇ ಸರ್ಕಾರಿ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತ ಸ್ಥಾನಕ್ಕೇರಬೇಕು. ಇದರಿಂದ ನಿಮಗೆ ವಿದ್ಯೆ ಕೊಟ್ಟ ಗುರುಗಳು ಖುಷಿ ಪಡುತ್ತಾರೆ. ಇದೇ ನೀವು ಗುರುಗಳಿಗೆ, ಪೋಷಕರಿಗೆ ಕೊಡುವ ರಿಟರ್ನ್ ಗಿಫ್ಟ್ ಎಂದರು.

ನಗರ ಪಾಲಿಕೆ ಮಹಾಪೌರರಾದ ಜಯಮ್ಮ ಗೋಪಿನಾಯ್ಕ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಕೆ.ಜಿ. ಶಿವಕುಮಾರ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಶಿವರಾಜು, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ, ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಎಸ್.ಓ. ರವಿ, ಸೀತಮ್ಮ ಕಾಲೇಜಿನ ಪ್ರಾಚಾರ್ಯ ಟಿ.ಎ. ಕುಸಗಟ್ಟಿ, ಪಾಲಿಕೆ ಸದಸ್ಯ ಎ. ನಾಗರಾಜ್, ದಿನೇಶ್ ಕೆ. ಶೆಟ್ಟಿ ಮತ್ತು ಇತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಮೈಸೂರು-ಚೆನ್ನೈ ರಾಜ್ಯದ ಮೊದಲ ಬುಲೆಟ್ ರೈಲು

## ಸಮಗ್ರ ಯೋಜನಾ ವರದಿಗೆ ಕೇಂದ್ರ ಅಸ್ತು

ಬೆಂಗಳೂರು, ಜು. 29 - ಮೈಸೂರು - ಬೆಂಗಳೂರು - ಚೆನ್ನೈ ನಡುವೆ ಸಂಚರಿಸಲಿರುವ ರಾಜ್ಯದ ಮೊಟ್ಟ ಮೊದಲ ಬುಲೆಟ್ ಟ್ರೈನ್ ಯೋಜನೆಗೆ ಸಮಗ್ರ ಯೋಜನಾ ವರದಿ ಸಿದ್ದಪಡಿಸಲು ಕೇಂದ್ರ ಸರ್ಕಾರ ಹಸಿರು ನಿಶಾನೆ ತೋರಿದೆ.

ಬುಲೆಟ್ ರೈಲು ಅರಮನೆ ನಗರಿ-ಸಿಲಿಕಾನ್‌ಸಿಟಿ-ಚೆನ್ನೈ ನಡುವಿನ 484 ಕಿಲೋ ಮೀಟರ್ ಅಂತರವನ್ನು ಕೇವಲ ಮೂರು ಗಂಟೆಗಳಲ್ಲಿ ಕ್ರಮಿಸಲಿದೆ.

ಈ ಯೋಜನೆಗೆ ಒಟ್ಟಾರೆ 1.15 ಲಕ್ಷ ಕೋಟಿ ತಗುಲಲಿದ್ದು, ಯೋಜನೆಗೆ ರಾಜ್ಯದಲ್ಲಿ ಅಗತ್ಯವಿರುವ ಭೂಮಿಯನ್ನು ಇಲ್ಲಿನ ಸರ್ಕಾರವೇ ಭರಿಸಲಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಮೂಲ ಸೌಕರ್ಯ ಸಚಿವ ವಿ. ಸೋಮಣ್ಣ, ಮುಂಬೈ-ಅಹಮದಾಬಾದ್ ನಡುವಿನ ಬುಲೆಟ್ ಟ್ರೈನ್ ನಂತರ ಕರ್ನಾಟಕ ಮತ್ತು ತಮಿಳುನಾಡಿನ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದರು. ಈ ಯೋಜನೆಗೆ ಸಂಬಂಧಿಸಿದಂತೆ ಸಮಗ್ರ ಯೋಜನಾ ವರದಿ ನೀಡಲು ನ್ಯಾಷನಲ್ ಹೈಸ್ಪೀಡ್ ರೈಲ್ವೇ ಕಾರ್ಪೊರೇಷನ್ ಗೆ ಕೇಂದ್ರ ಸರ್ಕಾರ ಆದೇಶ ನೀಡಿದೆ ಎಂದರು.

ರಾಜ್ಯದ ಮೊಟ್ಟ ಮೊದಲ ಯೋಜನೆ ಜಾರಿಯಾದರೆ, ಮೈಸೂರಿನಿಂದ ಬೆಂಗಳೂರಿಗೆ ನಲವತ್ತೈದು ನಿಮಿಷಗಳಲ್ಲಿ ಬರಬಹುದು. ಅದೇ ರೀತಿ ಬೆಂಗಳೂರಿನಿಂದ ಚೆನ್ನೈಗೆ ಎರಡು ಗಂಟೆಗಳ ಅವಧಿ ಸಾಕು ಎಂದರು.

ಬೆಂಗಳೂರು-ಮೈಸೂರು ದಶಪಥ ರಸ್ತೆಗೆ ಹೊಂದಿಕೊಂಡಂತೆ ಬುಲೆಟ್ ಟ್ರೈನ್ ಸಂಚಾರಕ್ಕೆ ಮಾರ್ಗ ಒದಗಿಸಬಹುದು ಎಂಬುದೂ ಸೇರಿದಂತೆ ಯೋಜನೆಗೆ ಭೂಮಿ ಒದಗಿಸುವ ಸಂಬಂಧ ಒಂದೆರಡು ದಿನಗಳಲ್ಲೇ ಉನ್ನತ ಮಟ್ಟದ ಸಭೆ ನಡೆಸಿ, ತೀರ್ಮಾನ ಕೈಗೊಳ್ಳಲಾಗುವುದು ಎಂದರು. ಈ ಯೋಜನೆಯ ಪೂರ್ಣ ಹಣವನ್ನು ಕೇಂದ್ರವೇ ಭರಿಸಲಿದೆ. ಯೋಜನೆಗೂ ಮುನ್ನ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಮಹತ್ವದ ಒಪ್ಪಂದವೂ ಆಗಬೇಕಾಗಿದೆ ಎಂದರು.

# ಕಾಯಕ ಭಗವಂತನಿಗಿಂತ ಶ್ರೇಷ್ಠ : ಸಿದ್ಧರಾಮ ಶ್ರೀ

**(1ನೇ ಪುಟದಿಂದ)** ಕುಂಬಾರ್ ಮಾತನಾಡಿ, ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಈಗ 12-13 ವರ್ಷಗಳಾಗಿವೆ. ಇದು ಮಾದರಿ ವಿಶ್ವವಿದ್ಯಾನಿಲಯವಾಗಲು ಮುಂದಿನ ನಾಲ್ಕು ವರ್ಷಗಳಲ್ಲಿ ಶ್ರಮಿಸುವುದಾಗಿ ಹೇಳಿದರು.

ಮಾಜಿ ಸಚಿವ ಎಸ್.ಎಸ್. ಪಾಟೀಲ್ ಮಾತನಾಡಿ, ಮಾಗನೂರು ಬಸಪ್ಪ ಅವರು ರಾಜಕೀಯ, ಸಾಹಿತ್ಯ, ಧಾರ್ಮಿಕ ಹಾಗೂ ಸಹಕಾರ ಕ್ಷೇತ್ರಗಳಲ್ಲಿ ಮುಂಚೂಣಿ ಸೇವೆ ಸಲ್ಲಿಸಿದ್ದರು. ಅವರು ಬಸವ ತತ್ವ ಆಚರಣೆಯಲ್ಲಿ ಮುಂದುವರೆದಿದ್ದರು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಬಿ. ವಾಮದೇವಪ್ಪ, ಮುಂದಿನ ನಾಲ್ಕು ವರ್ಷಗಳಲ್ಲಿ ದಾವಣಗೆರೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಬೇಕು ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕ.ಸಾ.ಪ. ಮಾಜಿ ಜಿಲ್ಲಾಧ್ಯಕ್ಷ ಡಾ. ಹೆಚ್. ಎಸ್. ಮಂಜುನಾಥ ಕುರ್ಕಿ, ಮಾಗನೂರು ಬಸಪ್ಪ ಅವರ ಜೀವನ ಆದರ್ಶವಾಗಿದೆ. ಅವರು ಮೌಲ್ಯಗಳಿಂದ ಶ್ರೇಷ್ಠತೆ ಪಡೆದವರು ಎಂದರು.

ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದ ಅಧ್ಯಕ್ಷ ಎಂ. ಬಿ. ಸಂಗಮೇಶ್ವರ ಗೌಡ್ರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಸಂಗಮೇಶ್ವರ ಗೌಡರ ಪತ್ನಿ ಸುನಂದಾ ದೇವಿ ಉಪಸ್ಥಿತರಿದ್ದರು.

## ಅಧ್ಯಯನ ಕೇಂದ್ರಕ್ಕೆ

**(1ನೇ ಪುಟದಿಂದ) ವುದಾಗಿ ಗದಗಿನ ತೋಂಟದಾರ್ಯ ಜಗದ್ಗುರು ಶ್ರೀ ಡಾ. ತೋಂಟದ ಸಿದ್ದರಾಮ ಶ್ರೀಗಳು ತಿಳಿಸಿದರು.**

**ಇದಕ್ಕೂ ಮುಂಚೆ ಮಾತನಾಡಿದ್ದ ಕ. ಸಾ.ಪ. ಮಾಜಿ ಜಿಲ್ಲಾಧ್ಯಕ್ಷ ಮಂಜುನಾಥ ಕುರ್ಕಿ, ವಿಶ್ವವಿದ್ಯಾನಿಲಯದಲ್ಲಿ ಶರಣ ಸಂಸ್ಕೃತಿ ಅಧ್ಯಯನ ಕೇಂದ್ರ ಆರಂಭಿಸಬೇಕು. ಇದಕ್ಕೆ ಒದಗುವ ವೆಚ್ಚವನ್ನು ಶರಣ ಮಾಗನೂರು ಬಸಪ್ಪ ಟ್ರಸ್ಟ್ ಒದಗಿಸಲಿದೆ ಎಂದು ಹೇಳಿದ್ದರು.**

# ಬಲಿದಾನಗೈದವರ ನೆನಪು ಚಿರಾಯುವಾಗಿಸಲು ಕರೆ



## ಸ್ವಾತಂತ್ರ್ಯ ದಿನಾಚರಣೆ ಪೂರ್ವ ಸಿದ್ದತಾ ಸಭೆಯಲ್ಲಿ ಜಿಲ್ಲಾಧಿಕಾರಿ ಕಪಾಸಿ

ದಾವಣಗೆರೆ, ಜು.29- ಈ ಬಾರಿಯ ಸ್ವಾತಂತ್ರ್ಯೋತ್ಸವವನ್ನು ಸ್ವಾತಂತ್ರ್ಯಕ್ಕಾಗಿ ಬಲಿದಾನಗೈದ ವೀರರ ನೆನಪನ್ನು ಚಿರಸ್ಥಾಯಿಯಾಗಿ ಉಳಿಸಲು ಅರ್ಥಪೂರ್ಣವಾಗಿ ಆಚರಿಸಬೇಕಾಗಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಿನ್ನೆ ನಡೆದ 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ಮಾರ್ಗಸೂಚಿಯನ್ವಯ ಜಿಲ್ಲಾ ಮಟ್ಟದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಬೇಕಿದೆ. ಸರ್ಕಾರಿ ಕಚೇರಿಗಳಲ್ಲಿ ಹಳೆಯ ಧ್ವಜಗಳ ಬದಲಿಗೆ ಕಡ್ಡಾಯವಾಗಿ ಹೊಸ ಧ್ವಜ ಖರೀದಿಸಿ ಧ್ವಜ ಸಂಹಿತೆ ಪ್ರಕಾರ ಧ್ವಜಾರೋಹಣ ನೆರವೇರಿಸಬೇಕು. ಕಡ್ಡಾಯವಾಗಿ ಎಲ್ಲಾ ಸರ್ಕಾರಿ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಗೈರಾಗದೇ ಹಾಜರಿರಬೇಕು.

ಆಗಸ್ಟ್ 15ರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣವನ್ನು ಜಿಲ್ಲಾ ಉಸ್ತುವಾರಿ ಸಚಿವರು ನೆರವೇರಿಸಲಿದ್ದಾರೆ. ಈ ಬಾರಿ ಡಿಆರ್, ಸಿವಿಲ್, ಹೋಂಗಾರ್ಡ್ ಅರಣ್ಯ ಮತ್ತು ಅಗ್ನಿ ಶಾಮಕದಳ, ಎನ್‌ಸಿಸಿ, ಸ್ಕೌಟ್ ಮತ್ತು ಗೈಡ್ಸ್ ಹಾಗೂ ಇತರೆ ತಂಡಗಳು ಪಥಸಂಚಲನದಲ್ಲಿ ಪಾಲ್ಗೊಳ್ಳಲಿವೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿ ಕಟ್ಟಡಗಳ ಮೇಲೆ ಆಗಸ್ಟ್ 14 ಮತ್ತು 15 ರಂದು ವಿದ್ಯುತ್ ದೀಪಾಲಂಕಾರ ಮಾಡಲು ಆಯಾ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು. ಅಲ್ಲದೆ, ಜಯದೇವ ವೃತ್ತ, ಹೊಂಡದ ವೃತ್ತ, ಗುಂಡಿ ವೃತ್ತ, ಗಾಂಧಿ ವೃತ್ತ, ರಾಮ್ ಅಂಡ್ ಕೋ ವೃತ್ತ, ಕೆ.ಇ.ಬಿ ವೃತ್ತ, ಶಿವಪ್ಪ ವೃತ್ತ, ಹಗೇದಿಬ್ಬ ವೃತ್ತ, ಶಿವಾಜಿ ವೃತ್ತ, ಅಂಬೇಡ್ಕರ್ ವೃತ್ತ ಮುಂತಾದ ಪ್ರಮುಖ ವೃತ್ತಗಳಿಗೆ ದೀಪಾಲಂಕಾರ ಮಾಡಲಾಗುವುದು ಎಂದರು.

ಜಿಲ್ಲೆಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಲು ತೀರ್ಮಾನಿಸಲಾಯಿತು. ಪ್ಲಾಸ್ಟಿಕ್ ಧ್ವಜಗಳನ್ನು ಕಡ್ಡಾಯವಾಗಿ ಬಳಸುವಂತಿಲ್ಲ. ಅಂಗಡಿಗಳಲ್ಲಿ, ವ್ಯಾಪಾರ, ವಹಿವಾಟು ಕೇಂದ್ರಗಳಲ್ಲಿ ಪ್ಲಾಸ್ಟಿಕ್ ಧ್ವಜಗಳ ಮಾರಾಟ ಮತ್ತು ಬಳಕೆ ಮಾಡಿದಲ್ಲಿ ಅಂತಹವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಎಸ್ಪಿ ಸಿ.ಬಿ ರಿಷ್ಯಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಡಿಹೆಚ್‌ಓ ನಾಗರಾಜ್, ಡಿಡಿಪಿಐ ತಿಪ್ಪೇಶಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ವಾಸಂತಿ ಉಪ್ಪಾರ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಕೌಸರ್ ರೇಷ್ಮಾ ಮತ್ತು ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಇರಾನಿ, ಪುತ್ರಿ ವಿರುದ್ಧದ ಟ್ವೀಟ್ ತೆಗೆದು ಹಾಕಲು ಹೈಕೋರ್ಟ್ ಆದೇಶ

ನವದೆಹಲಿ, ಜು. 29 – ಕೇಂದ್ರ ಸಚಿವೆ ಸ್ಮೃತಿ ಇರಾನಿ ಹಾಗೂ ಅವರ ಪುತ್ರಿಯ ವಿರುದ್ಧ ಮಾಡಿರುವ ಆರೋಪಗಳ ಟ್ವೀಟ್‌ಗಳನ್ನು ತೆಗೆದು ಹಾಕುವಂತೆ ದೆಹಲಿ ನ್ಯಾಯಾಲಯ ಕಾಂಗ್ರೆಸ್ ಮುಖಂಡರಿಗೆ ಸಮನ್ಸ್ ಕಲಿಸಿದೆ. ಕಾಂಗ್ರೆಸ್ ನಾಯಕರಾದ ಜೈರಾಮ್ ರಮೇಶ್, ಪವನ್ ಖೇರ ಹಾಗೂ ನೆಟ್ಟ ಡಿಸೌಜಾ ವಿರುದ್ಧ ಇರಾನಿ ಅವರು ಮಾನನಷ್ಟ ಪ್ರಕರಣ ದಾಖಲಿಸಿದ್ದರು. ಆಧಾರ ರಹಿತ ಹಾಗೂ ಸುಳ್ಳು ಆರೋಪ ಮಾಡಿರುವ ಕಾಂಗ್ರೆಸ್ ನಾಯಕರು 2 ಕೋಟಿ ರೂ. ಪರಿಹಾರ ನೀಡುವಂತೆ ಸಚಿವೆ ಪ್ರಕರಣ ದಾಖಲಿಸಿದ್ದರು. ಟ್ವೀಟ್, ರೀಟ್ವೀಟ್, ಪೋಸ್ಟ್, ವಿಡಿಯೋ ಹಾಗೂ ಫೋಟೋಗಳನ್ನು ಸಾಮಾಜಿಕ ಮಾಧ್ಯಮಗಳಿಂದ ತೆಗೆದು ಹಾಕಬೇಕು. ಸಾಮಾಜಿಕ ಜಾಲತಾಣಗಳೂ ಸಹ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೈಕೋರ್ಟ್ ಹೇಳಿದೆ.

ಇರಾನಿ ಅವರ 18 ವರ್ಷದ ಮಗಳು ಜೋಯಿಶ್ ಇರಾನಿ ಅವರು ಗೋವಾದಲ್ಲಿ ಅಕ್ರಮವಾಗಿ ಬಾರ್ ನಡೆಸುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದರು. ಇರಾನಿ ವಿರುದ್ಧ ತೇಜೋವಧೆ ಮಾಡುವ ಹಾಗೂ ಬೋಗಸ್ ಆರೋಪಗಳನ್ನು ಮಾಡಲಾಗಿದೆ. ಮೇಲ್ನೋಟಕ್ಕೆ ಈ ವಿಷಯ ಕಂಡು ಬರುತ್ತಿದೆ ಎಂದು ನ್ಯಾಯಾಲಯ ಹೇಳಿದೆ.

ಇರಾನಿ ಪರವಾಗಿ ವಾದ ಮಂಡಿಸಿದ್ದ ವಕೀಲ ಕೆ.ಕೆ. ಕೌಲ್, ಮೂವರು ಕಾಂಗ್ರೆಸ್ ನಾಯಕರು ಪೂರ್ವ ನಿಯೋಜಿತವಾಗಿ ತೇಜೋವಧೆ ತರುವ ಆರೋಪಗಳನ್ನು ಮಾಡಿದ್ದಾರೆ. ಮಕ್ಕಳನ್ನು ಬಳಸಿ ರಾಜಕೀಯ ದ್ವೇಷ ಮಾಡಲಾಗುತ್ತಿದೆ ಎಂದು ಹೇಳಿದ್ದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರ ವಿರುದ್ಧ ಇರಾನಿ ಅವರು ನೋಟಿಸ್ ಕಳಿಸಿದ್ದರು. ಇದಕ್ಕೆ ಕಾಂಗ್ರೆಸ್ ನಾಯಕರು ಉತ್ತರ ನೀಡದೇ ಇದ್ದಾಗ ಹೈಕೋರ್ಟ್ ಮೊರೆ ಹೋಗಿದ್ದರು.

# ಸ್ವಸಹಾಯ ಸಂಘಗಳ ಸಬಲೀಕರಣಕ್ಕೆ ರಾಜ್ಯದೊಂದಿಗೆ ಮಿಶೋ ಒಪ್ಪಂದ

ಬೆಂಗಳೂರು, ಜು. 29 - ಸಂಜೀವಿನಿ - ಕೆ.ಎಸ್.ಆರ್.ಎಲ್.ಪಿ.ಎಸ್ ಮತ್ತು ಇ-ಕಾಮರ್ಸ್ ಸಂಸ್ಥೆ ಮೀಶೋ ನಡುವೆ ರಾಜ್ಯದ 2500 ಸ್ವಸಹಾಯ ಗುಂಪುಗಳ ಸಬಲೀಕರಣಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ಸ್ತ್ರೀ ಸಾಮರ್ಥ್ಯ ಕರ್ನಾಟಕದಿಂದ ಜಗತ್ತಿಗೆ ತಿಳಿಯಲಿದೆ ಎಂದು ತಿಳಿಸಿದರು. ಸ್ತ್ರೀ ಸಾಮರ್ಥ್ಯ ಯೋಜನೆಯನ್ನು ರಾಜ್ಯ ಸರ್ಕಾರ ಪ್ರಾರಂಭಿಸಿದ್ದು ಈ ಯೋಜನೆಯನ್ನು ಎಂಡ್ ಟು-ಎಂಡ್ ಮಾರ್ಗದಲ್ಲಿ ಕೈಗೊಳ್ಳಲಾಗುವುದು. ಗ್ರಾಮೀಣ ಮಹಿಳೆಯರ ಸಬಲೀಕರಣದ ಸರ್ಕಾರದ ಈ ಪ್ರಯತ್ನದಲ್ಲಿ ಕೆನರಾ ಬ್ಯಾಂಕ್ ಹಾಗೂ ಮೀಶೋ ಸಂಸ್ಥೆಗಳು ಕೈಜೋಡಿಸಿರುವುದು ಸ್ವಾಗತಾರ್ಹ ಎಂದರು.

# ಭತ್ತದ ಬಿತ್ತನೆ ವಿವರ ನಿಲ್ಲಿಸಿದ ಕೇಂದ್ರ

**(1ನೇ ಪುಟದಿಂದ)** ವಿವರ ನೀಡಲಾಗಿತ್ತು. ಆ ವೇಳೆ, ಭತ್ತದ ಬಿತ್ತನೆ ಪ್ರಮಾಣ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.17.4ರಷ್ಟು ಕಡಿಮೆ ಇತ್ತು. ಕಳೆದ ವರ್ಷ 155.53 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾ ಗಿದ್ದರೆ, ಈ ವರ್ಷ 128.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು.

# ಸೋಲಿನ ಭಯದಲ್ಲಿ ಹತಾಶರಾಗಿ ಟೀಕೆ

## ಶಾಸಕ ರಾಮಚಂದ್ರ ಅವರಿಗೆ ಮಾಜಿ ಶಾಸಕ ಎಚ್.ಪಿ. ರಾಜೇಶ್ ತಿರುಗೇಟು



ಬರುವ ಆಗಸ್ಟ್ 3 ರಂದು ದಾವಣಗೆರೆಯಲ್ಲಿ ಮಾಜಿ ಸಿ.ಎಂ. ಸಿದ್ಧರಾಮಯ್ಯನವರ 75ನೇ ಹುಟ್ಟುಹಬ್ಬ ವಿಜೃಂಭಣೆಯಿಂದ ನೆರವೇರುತ್ತಿದೆ. ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್ ನೇತೃತ್ವ ವಹಿಸಿಕೊಂಡಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಸೇರಿದಂತೆ ರಾಷ್ಟ್ರ, ರಾಜ್ಯಮಟ್ಟದ ಎಲ್ಲಾ ನಾಯಕರು ಆಗಮಿಸುತ್ತಿದ್ದು, ಸಿದ್ಧರಾಮೋತ್ಸವ ಮುಗಿದ ಬಳಿಕ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ನೆನಪಿಗಾಗಿ ಕ್ಷೇತ್ರದಲ್ಲಿ 125 ಕಿ.ಮೀ. ಪಾದಯಾತ್ರೆ ಹಮ್ಮಿಕೊಂಡಿದ್ದೇವೆ. ಚಿಕ್ಕ ಉಜ್ಜಿನಿಯಿಂದ ಆರಂಭವಾಗುವ ಪಾದಯಾತ್ರೆ ವಿವಿಧ ಹಳ್ಳಿಗಳ ಮೂಲಕ ಸಾಗಿ ಅರಸೀಕೆರೆಯಲ್ಲಿ ಮುಕ್ತಾಯವಾಗಲಿದೆ.

**- ಹೆಚ್.ಪಿ. ರಾಜೇಶ್**, ಮಾಜಿ ಶಾಸಕರು.

ಜಗಳೂರು, ಜು. 29- ಬರುವ ಚುನಾವಣೆಯ ಸೋಲಿನ ಭಯದಲ್ಲಿ ಹತಾಷರಾಗಿ ನನ್ನ ವೈಯಕ್ತಿಕ ಜೀವನದ ಬಗ್ಗೆ ಶಾಸಕರು ಮಾತನಾಡಿದ್ದಾರೆ. ನಮ್ಮ ಪಕ್ಷದ ಮುಖಂಡರಾಗಲೀ, ಕಾರ್ಯಕರ್ತರಾಗಲೀ ಅವರ ವೈಯಕ್ತಿಕ ಜೀವನದ ಬಗ್ಗೆ ಮಾತನಾಡಿಲ್ಲ. ಅವರ ಭ್ರಷ್ಟಾಚಾರ ಬಗ್ಗೆ ಪ್ರಶ್ನಿಸಿದ್ದೇವೆ. ಬಟ್ಟೆ ಹಾವು ಬಿಟ್ಟು ಜನರನ್ನು ದಿಕ್ಕು ತಪ್ಪಿಸುವ ಕೆಲಸವನ್ನು ಶಾಸಕರು ಮಾಡುತ್ತಿದ್ದಾರೆ ಎಂದು ಮಾಜಿ ಶಾಸಕ ಹೆಚ್.ಪಿ. ರಾಜೇಶ್ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಶಾಸಕ ಎಸ್.ವಿ. ರಾಮಚಂದ್ರ ಅವರು ನನ್ನ ವೈಯಕ್ತಿಕ ಬದುಕಿನ ಸಿಡಿ, ವಿಡಿಯೋಗಳು ಇವೆ ಎಂದು ಹೇಳಿದ್ದಾರೆ. ಅವರಿಗೆ ನಾನು ಬಹಿರಂಗವಾಗಿ ಸವಾಲು ಹಾಕುತ್ತೇನೆ. ನನ್ನ ಸಿಡಿ, ವಿಡಿಯೋಗಳನ್ನು ಬಹಿರಂಗ ಪಡಿಸಲಿ. ಕ್ಷೇತ್ರದ ಜನತೆಗೆ ಸತ್ಯ ಗೊತ್ತಾಗಲಿ ಎಂದು ಸವಾಲು ಹಾಕಿದರು.

ಶಾಸಕರು ಶೇ. 40ರಷ್ಟು ಪರ್ಸೆಂಟೇಜ್ ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಪ ಮಾಡಿದ್ದೇನೆ. ಅವರು ಪ್ರಚಾರ ಪ್ರಿಯರು, ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ ಎಂದು ಆರೋಪ ಮಾಡಿದ್ದೇನೆಯೇ ಹೊರತು, ಅವರ ವೈಯಕ್ತಿಕ ಜೀವನದ ಬಗ್ಗೆ, ಅವರ ಆಸ್ತಿ ಬಗ್ಗೆ ನಾನು ಎಲ್ಲಿಯೂ ಮಾತನಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಅವರ ವೈಯಕ್ತಿಕ ಜೀವನದ ದಾಖಲೆಗಳು ನನ್ನ ಬಳಿಯೂ ಇವೆ. ಶಾಸಕರು ವಿವೇಚನೆಯಿಂದ ಮಾತನಾಡಲಿ. ಅವರು ಹಣಕ್ಕಾಗಿ ಮಾರಾಟವಾಗಿರುವ ಶಾಸಕರು. ಮತದಾರರಿಗೆ ಬೆಲೆ ಕೊಡದೇ, ದುಡ್ಡಿನ ಆಸೆಗಾಗಿ ಪಕ್ಷಾಂತರ ಮಾಡಿ ಪಕ್ಷ ಬದಲಿಸಿದವರು. ನನ್ನ ವೈಯಕ್ತಿಕ ಬದುಕಿನ ಬಗ್ಗೆ ಮಾತನಾಡುವ ನೈತಿಕತೆ ರಾಮಚಂದ್ರ ಅವರಿಗಿಲ್ಲ ಎಂದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸಮುದಾಯದ ಜನತೆಗೆ ನಿಮ್ಮ ಕೊಡುಗೆ ಏನು? ಮಾಹಿತಿ ಹಕ್ಕಿನ ಅಡಿ ಕೇಳುತ್ತೇನೆ. ನೀವು ಹಸ್ತಕ್ಷೇಪ ಮಾಡದೇ ಸುಮ್ಮನಿರಿ. ಆಗ ಸತ್ಯ ಹೊರ ಬರುತ್ತದೆ ಎಂದು ಮಾಜಿ ಶಾಸಕರು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ತಿಪ್ಪೇಸ್ವಾಮಿ ಗೌಡ ಮಾತನಾಡಿ, ಅಣಬೂರಿನ ಕಾರ್ಯಕ್ರಮದಲ್ಲಿ ನಾನು ಶಾಸಕರನ್ನು 'ಅವನು ಇವನು' ಎಂದಿದ್ದು ನಿಜ. ಅದು ರಾಜಕಾರಣದಲ್ಲಿ ಸಹಜ. ಅದೇನು ತೇಜೋವಧೆಯಲ್ಲ. ರಾಜಕೀಯ ಕ್ಷೇತ್ರದಲ್ಲಿ ಟೀಕೆ ಸಹಜ. ಆದರೆ ವೈಯಕ್ತಿಕವಾದ ದ್ವೇಷವಿಲ್ಲ ಎಂದರು.

ಕಾಂಗ್ರೆಸ್ ಮುಖಂಡ ಎಲ್.ಬಿ. ಭೈರೇಶ್ ಮಾತನಾಡಿ, ಶಾಸಕರಿಗೆ ಬುದ್ಧಿ ಭ್ರಮಣೆಯಾಗಿದೆ. ಅವರ ಸೋಲು ಖಚಿತ. ಹೀಗಾಗಿ ಅವರು ಸೋಲಿನಿಂದ ಕಂಗೆಟ್ಟು ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹ್ಮದ್, ಕೆಪಿಸಿಸಿ ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಾಟೀಲ್, ಮುಖಂಡರಾದ ಕುಬೇರಪ್ಪ, ವೆಂಕಟೇಶ್, ನಂಜುಂಡಸ್ವಾಮಿ, ಎ. ವೆಂಕಟೇಶ್, ಯು.ಜಿ. ಶಿವಕುಮಾರ್, ಎಸ್. ಕೆ. ರಾಮರೆಡ್ಡಿ, ಜಿ.ಡಿ. ಪ್ರಕಾಶ್, ಪಲ್ಲಾಗಟ್ಟೆ ಶೇಖರಪ್ಪ, ಬಸವಾಪುರ ರವಿಚಂದ್ರ ಸೇರಿದಂತೆ ಅನೇಕ ಮುಖಂಡರು ಶಾಸಕ ಎಸ್.ವಿ. ರಾಮಚಂದ್ರ ವಿರುದ್ಧ ವಾಗ್ದಾಳಿ ನಡೆಸಿದರು.

# ರಾಷ್ಟ್ರಪತಿಗೆ ಕ್ಷಮೆ ಯಾಚಿಸಿದ ರಂಜನ್ ಚೌಧರಿ

ನವದೆಹಲಿ, ಜು. 29 – ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು 'ರಾಷ್ಟ್ರಪತ್ನಿ' ಎಂದು ಕರೆದಿದ್ದ ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ, ತಮ್ಮ ಮಾತಿಗಾಗಿ ರಾಷ್ಟ್ರಪತಿ ಬಳಿ ಕ್ಷಮೆ ಯಾಚಿಸಿದ್ದಾರೆ. ಬಾಯ್ತಪ್ಪಿನಿಂದಾಗಿ ರಾಷ್ಟ್ರಪತ್ನಿ ಎಂದು ಹೇಳಿದ್ದೆ. ಇದಕ್ಕಾಗಿ ಕ್ಷಮೆ ಯಾಚಿಸುವುದಾಗಿ ಅವರು ತಿಳಿಸಿದ್ದಾರೆ. ರಂಜನ್ ಹೇಳಿಕೆ ಬಗ್ಗೆ ಬಿಜೆಪಿ ತೀವ್ರ ಟೀಕಾ ಪ್ರಹಾರ ನಡೆಸಿತ್ತು. ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿ ಬಿಜೆಪಿ ಈ ವಿಷಯವನ್ನು ಪ್ರಸ್ತಾಪಿಸಿ ತರಾಟೆಗೆ ತೆಗೆದುಕೊಂಡಿತ್ತು.

## ನಂದಿಗುಡಿಗೆ ಇಂದು ಸಚಿವ ಮಾಧುಸ್ವಾಮಿ

ಮಲೇಬೆನ್ನೂರು ಸಮೀಪದ ನಂದಿಗುಡಿ ಬೃಹನ್ಮಠದ ಸಮುದಾಯ ಭವನದಲ್ಲಿ ಇಂದು ಶನಿವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ರವರೆಗೆ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆ ಮತ್ತು ಚಂದ್ರಶೇಖರ್ ಪೂಜಾರ್ ಅಭಿಮಾನಿ ಬಳಗ ಹಾಗೂ ಮಲೇಬೆನ್ನೂರಿನ ಶ್ರೀ ನಂದಿ ಸೌಹಾರ್ದ ಸಹಕಾರಿ ಇವರ



ಸಂಯುಕ್ತಾಶ್ರಯದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಜಿಗಳಿ ಇಂದೂಧರ್ ತಿಳಿಸಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜರುಗುವ ಶಿಬಿರವನ್ನು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಉದ್ಘಾಟಿಸಲಿದ್ದಾರೆ.

**ರಂಗೋಲಿ ಸ್ಪರ್ಧೆ :** ಶ್ರೀ ನಂದಿ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಅಂಗವಾಗಿ ಮಹಿಳಾ ಸದಸ್ಯರಿಗೆ ಇಂದು ಶನಿವಾರ ಮಧ್ಯಾಹ್ನ 1 ಗಂಟೆಗೆ ರಂಗೋಲಿ ಸ್ಪರ್ಧೆ ಹಾಗೂ ಚಮಚ ನಿಂಬೆಹಣ್ಣಿನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ ತಿಳಿಸಿದ್ದಾರೆ.

## ಕಾರ್ಮಿಕ ಇಲಾಖೆಗೆ ಮಾಹಿತಿ ನೀಡಿ

ದಾವಣಗೆರೆ ಜು.29- ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾದ ಫಲಾನುಭವಿಗಳ ಮಕ್ಕಳು 2022-23 ನೇ ಶೈಕ್ಷಣಿಕ ವರ್ಷದಲ್ಲಿ 01 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಅಂತಹ ಮಕ್ಕಳ ಮಾಹಿತಿಯನ್ನು ಹತ್ತಿರದ ಕಾರ್ಮಿಕ ನಿರೀಕ್ಷಕರ ಕಚೇರಿಗಳಲ್ಲಿ ಆಗಸ್ಟ್ 3 ರೊಳಗಾಗಿ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ಕಾರ್ಮಿಕ ನಿರೀಕ್ಷಕರ ಕಚೇರಿ ಹಾಗೂ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬಹುದು ಎಂದು ದಾವಣಗೆರೆ ಜಿಲ್ಲಾ ಕಾರ್ಮಿಕ ಅಧಿಕಾರಿ ತಿಳಿಸಿದ್ದಾರೆ.

## ಮಾಚಿದೇವ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ-ಸಾಲಕ್ಕೆ ಅರ್ಜಿ

ದಾವಣಗೆರೆ,ಜು.29- ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ 2022-23ನೇ ಸಾಲಿನ ಸ್ವಯಂ ಉದ್ಯೋಗ ನೇರ ಸಾಲ ಹಾಗೂ ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಗಳ ಅನುಕೂಲಕ್ಕಾಗಿ ಹಿಂದುಳಿದ ವರ್ಗಗಳ ಮಡಿವಾಳ ಮತ್ತು ಅದರ ಉಪಜಾತಿಗಳಿಗೆ ಸೇರಿದ ಜನರ ಆರ್ಥಿಕ ಅಭಿವೃದ್ಧಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಆಗಸ್ಟ್ 3 ಕೊನೆಯ ದಿನವಾಗಿದೆ. ಮಾಹಿತಿಗೆ 08192-230934 ಸಂಪರ್ಕಿಸಬಹುದು ಎಂದು ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ.

### ಸಾರ್ವಜನಿಕ ಮಾಹಿತಿಗಾಗಿ ದಾವಣಗೆರೆ ನಗರದ ವಾಯುವಿನ ಗುಣಮಟ್ಟ

| ಕ್ರ.ಸಂ. | ಮಾಲಿನ್ಯ ಕಾರಕಗಳು | ಸತತ ವಾಯು ಗುಣಮಟ್ಟ ಮಾಪನ ಕೇಂದ್ರ, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ | ಮಾನವ ಚಾಲಿತ ಮಾಪನ ಕೇಂದ್ರ, ಟ್ರಾಫಿಕ್ ಪೊಲೀಸ್ ಸ್ಟೇಷನ್ (ದಕ್ಷಿಣ), ಪಿ.ಬಿ. ರಸ್ತೆ, ದಾವಣಗೆರೆ. | | 24 ಗಂಟೆಗಳಿಗೆ ನಿಗದಿಪಡಿಸಿದ ಮಾನದಂಡ (μg/m³) |
|---|---|---|---|---|---|
| | | ಸರಾಸರಿ (ದಿನಾಂಕ : 18.07.2022 ರಿಂದ ದಿನಾಂಕ 25.07.2022ರವರೆಗೆ) | ದಿನಾಂಕ:18.07.2022 | ದಿನಾಂಕ :21.07.2022 | |
| 01 | PM-10 (μg/m³) | 28.87 | 38 | 70 | 100 |
| 02 | PM-2.5 (μg/m³) | 6 | NM | NM | 60 |
| 03 | $SO_2$ (μg/m³) | BDL | BDL | BDL | 80 |
| 04 | $NO_2$- (μg/m³) | BDL | BDL | BDL | 80 |
| 05 | AMMONIA (μg/m³) | 22 | 9 | 8 | 400 |

BDL-Below Detection Limit
NM-Not Monitored

ಸಹಿ/-
ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಕರಾಮಾನಿ ಮಂಡಳಿ, ದಾವಣಗೆರೆ.

## ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 403/4-ಎ, ಡಾ॥ ಮೋದಿ ಕಣ್ಣಿನ ಆಸ್ಪತ್ರೆ ರಸ್ತೆ,
ಪಿ.ಜೆ. ಬಡಾವಣೆ, ದಾವಣಗೆರೆ-577 002. ಫೋ. : 255974

### 30ನೇ ವಾರ್ಷಿಕ ಮಹಾಸಭೆಯ ನೋಟೀಸ್

ಬ್ಯಾಂಕಿನ 2021-22ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 30.07.2022ನೇ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಷ.ಬ್ರ.ಡಾ. ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು, ಎಂಸಿಸಿ ಬಿ ಬ್ಲಾಕ್, ಶಿವಾಚಾರ್ಯ ನಿಕೇತನ ಹಿರೇಮಠ, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.



ಎನ್.ಜೆ. ಗುರುಸಿದ್ದಯ್ಯ, ಡಿಐಸಿ, ಅಧ್ಯಕ್ಷರು
ಕೆ.ಎಸ್. ಮಹೇಶ್ವರಪ್ಪ, ಎಂ.ಎಸ್ಸಿ, ನಿರ್ದೇಶಕರು
ಬಿ.ಹೆಚ್. ಪರಶುರಾಮಪ್ಪ, ಸಿವಿಲ್ ಇಂಜಿನಿಯರ್, ನಿರ್ದೇಶಕರು
ಹೆಚ್.ಎಂ. ವಿಶ್ವನಾಥ್, ಬಿ.ಎಸ್ಸಿ, ನಿರ್ದೇಶಕರು
ಶ್ರೀಮತಿ ಎನ್.ಎಂ. ಪಂಕಜ ವೀರಯ್ಯ, ನಿರ್ದೇಶಕರು
ನಿರಂಜನ್ ನಿಶಾನಿಮಠ್, ಎಂ.ಎ. ಉಪಾಧ್ಯಕ್ಷರು



ವಿಕಾಸ್ ಕುಮಾರ್, ಬಿ.ಕಾಂ., ನಿರ್ದೇಶಕರು
ಬಂಡಿವಾಡ ಎನ್.ವ್ಹಿ., ಡಿ.ಐ.ಎ., ನಿರ್ದೇಶಕರು
ಶ್ರೀಮತಿ ಕೌಶಲ್ಯ ಆರ್., ಬಿ.ಎ. ಬಿ.ಎಡ್, ನಿರ್ದೇಶಕರು
ರವೀಂದ್ರನಾಥ್ ಕೆ.ಆರ್. ಬಿ.ಇ. ಸಿವಿಲ್ ಇಂಜಿನಿಯರ್, ನಿರ್ದೇಶಕರು
ಡಾ. ಎಂ. ಸೋಮಶೇಖರಪ್ಪ, ಎಂ.ಎ., ಎಲ್.ಎಲ್.ಎಂ. ಪಿಹೆಚ್‌ಡಿ ವೃತ್ತಿಪರ ನಿರ್ದೇಶಕರು
ಸುಮಂತ್ ಎಂ.ಎಸ್., ಎಂ.ಕಾಂ. ಸಿ.ಎ., ವೃತ್ತಿಪರ ನಿರ್ದೇಶಕರು

ಕಾರ್ಯನಿರ್ವಾಹಕ ಮಂಡಳಿಯ ಅಪ್ಪಣೆಯ ಮೇರೆಗೆ
ಸಹಿ/- ಅಧ್ಯಕ್ಷರು

# ಜನನ, ಮರಣ ನೋಂದಣಿ ಕಾಯ್ದೆ ತಿದ್ದುಪಡಿ ಹಿಂಪಡೆಗೆ ವಕೀಲರ ಆಗ್ರಹ



ದಾವಣಗೆರೆ, ಜು.29- ಜನನ ಮತ್ತು ಮರಣ ನೋಂದಣಿ ಕಾಯ್ದೆ ತಿದ್ದುಪಡಿ ಹಿಂಪಡೆಯುವಂತೆ ಆಗ್ರಹಿಸಿ, ನಗರದಲ್ಲಿ ಇಂದು ಜಿಲ್ಲಾ ವಕೀಲರ ಸಂಘದ ನೇತೃತ್ವದಲ್ಲಿ ವಕೀಲರು ಪ್ರತಿಭಟನೆ ನಡೆಸಿದರು.

ದೇವರಾಜ ಅರಸು ಬಡಾವಣೆಯಲ್ಲಿನ ನ್ಯಾಯಾಲಯಗಳ ಸಂಕೀರ್ಣದ ಆವರಣದಲ್ಲಿನ ಸಂಘದ ಕಚೇರಿ ಬಳಿಯಿಂದ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ಸರ್ಕಾರವು ಜುಲೈ 18, 2022 ರಲ್ಲಿ ಜನನ ಮತ್ತು ಮರಣ ನೋಂದಣಿ ಕಾಯ್ದೆಗೆ ತಿದ್ದುಪಡಿ ತಂದು ಜನನ ಮತ್ತು ಮರಣ ವಿಳಂಬ ನೋಂದಣಿಯ ಅಧಿಕಾರ ವ್ಯಾಪ್ತಿಯಲ್ಲಿ ಸಿವಿಲ್, ಜೆಎಂಎಫ್ ಸಿ ನ್ಯಾಯಾಲಯದ ವ್ಯಾಪ್ತಿಯಿಂದ ಉಪ ವಿಭಾಗಾಧಿಕಾರಿಗಳವರ ನ್ಯಾಯಾಲಯಕ್ಕೆ ಹಸ್ತಾಂತರ ಮಾಡಿರುವುದು ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗಿದ್ದು ಮತ್ತು ಅಸಂವಿಧಾನಿಕ ಮತ್ತು ಕಾನೂನು ಬಾಹಿರವಾಗಿದೆ ಎಂದು ಪ್ರತಿಭಟನಾ ನಿರತ ವಕೀಲರು ಅಸಮಾಧಾನ ವ್ಯಕ್ತಪಡಿಸಿದರು.

ತಕ್ಷಣ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ಹಿಂಪಡೆಯಬೇಕು ಹಾಗೂ ಈಗಿರುವ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಮುಂದುವರೆಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಡಿ.ಪಿ. ಬಸವರಾಜು, ಕಾರ್ಯದರ್ಶಿ ಲೋಕಿಕೆರೆ ಹೆಚ್. ಪ್ರದೀಪ್, ಕೆ.ಕೆ.ರಂಗಸ್ವಾಮಿ, ಗುಮ್ಮನೂರು ಮಲ್ಲಿಕಾರ್ಜುನ್, ಎನ್.ಎಂ. ಆಂಜನೇಯ ಗುರೂಜಿ, ಟಿ.ಬಿ.ರಾಮಣ್ಣ, ಶರಣಪ್ಪ, ಬಾತಿ ಚಂದ್ರಪ್ಪ, ಗಿರಿ, ಮಂಜು, ಮನು ಕುಮಾರ್, ಗಿರೀಶ್, ರಘು ಸೇರಿದಂತೆ ಇತರರು ಭಾಗವಹಿಸಿದ್ದರು.

# 3ಬಿ ಮೀಸಲಾತಿಗೆ ಒತ್ತಾಯಿಸಿ ಆ.1ರಂದು ಮಠಾಧೀಶರ ಮೆರವಣಿಗೆ, ಸಿಎಂಗೆ ಮನವಿ

ದಾವಣಗೆರೆ, ಜು. 29- ವೀರಶೈವ ಲಿಂಗಾಯತ ಸಮುದಾಯದ ಎಲ್ಲಾ ಪಂಗಡಗಳನ್ನು ಕೇಂದ್ರದ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯಲ್ಲಿ (3ಬಿ) ಸೇರಿಸುವಂತೆ ಒತ್ತಾಯಿಸಿ ಆಗಸ್ಟ್ 1ರ ಸೋಮವಾರ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಗಾಂಧಿ ವೃತ್ತದಿಂದ ಉಪ ವಿಭಾಗಾಧಿಕಾರಿ ಕಚೇರಿಗೆ ಮೆರವಣಿಗೆ ಮೂಲಕ ತೆರಳಲಾಗುವುದು. ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಸೇರಿದಂತೆ ಆವರಗೊಳ್ಳ, ವಿರಕ್ತಮಠ, ಹರಪನಹಳ್ಳಿಯ ತೆಗ್ಗಿನಮಠ, ಹೊನ್ನಾಳಿಯ ಹಿರೇಕಲ್ಮಠ, ಹರಿಹರದ ಪುಣ್ಯಕೋಟಿ, ಚನ್ನಗಿರಿಯ ಕೇದಾರ ಲಿಂಗೇಶ್ವರದ ಸ್ವಾಮೀಜಿಗಳು ಸೇರಿದಂತೆ ಜಿಲ್ಲೆಯ ವಿವಿಧ ಮಠಾಧೀಶರು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ವೀರಶೈವ ಲಿಂಗಾಯತ ಸಮುದಾಯದಲ್ಲಿ 92 ಒಳ ಪಂಗಡಗಳಿವೆ. 3ಬಿ ಮೀಸಲಾತಿ ಇದೆ ಎನ್ನಲಾಗುತ್ತಿದೆಯಾದರೂ, ಸೌಲಭ್ಯಗಳು ದೊರೆಯುತ್ತಿಲ್ಲ. ಆದ್ದರಿಂದ ಮೀಸಲಾತಿ ಅನುಷ್ಠಾನಕ್ಕಾಗಿ ಒತ್ತಾಯಿಸಿ ಮನವಿ ಸಲ್ಲಿಸಲಾಗುವುದು ಎಂದು ಅವರು ವಿವರಿಸಿದರು.

> ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ನೇತೃತ್ವದಲ್ಲಿ ಮುಖ್ಯಮಂತ್ರಿಗಳಿಗೆ ಮನವಿ
>
> - ದೇವರಮನೆ ಶಿವಕುಮಾರ್, ಜಿಲ್ಲಾಧ್ಯಕ್ಷರು, ವೀರಶೈವ ಮಹಾಸಭಾ

ಮಹಾಸಭಾದ ನಗರಾಧ್ಯಕ್ಷ ಜಿ. ಶಿವಯೋಗಪ್ಪ, ಜಿಲ್ಲಾ ಮಹಿಳಾ ಅಧ್ಯಕ್ಷರಾದ ಶುಭ ಐನಳ್ಳಿ, ರಾಷ್ಟ್ರೀಯ ಯುವ ಘಟದ ಉಪಾಧ್ಯಕ್ಷ ಸಂದೀಪ್ ಅಣಬೇರು, ನಿಖಿಲ್ ಕೊಂಡಜ್ಜಿ, ಕರೇಶಿವಪ್ಪ ಸಿದ್ದೇಶ್, ಜಯಪ್ರಕಾಶ್ ಮಾಗಿ, ಐಗೂರು ಸಿ.ಚಂದ್ರಶೇಖರ್ ಹಾಗು ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಆಸ್ಪತ್ರೆ ಲೈಸನ್ಸ್ ರದ್ಧತಿಗೆ ಧರಣಿ ಮುಂದುವರಿಕೆ

ದಾವಣಗೆರೆ, ಜು. 29- ಗುರುನಾಥ ಆಸ್ಪತ್ರೆ ವೈದ್ಯರ ಲೈಸನ್ಸ್ ರದ್ದುಗೊಳಿಸಿ, ಆಸ್ಪತ್ರೆಯನ್ನು ಮುಚ್ಚುವವರೆಗೂ ಜಿಲ್ಲಾಡಳಿತದ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಮುಂದುವರೆಯಲಿದೆ ಎಂದು ರಾಷ್ಟ್ರೀಯ ಪ್ರಬುದ್ಧ ಸೇನೆಯ ಸಂಸ್ಥಾಪಕ ಅಧ್ಯಕ್ಷ ಸಿ.ಎಲ್. ಅವಿನಾಶ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯನಗರದ ಅನ್ನಪೂರ್ಣಮ್ಮ ಎಂಬ ಮಹಿಳೆಗೆ ಚಿಕಿತ್ಸೆ ನೀಡುವಲ್ಲಿ ನಿರ್ಲಕ್ಷತೆ ವಹಿಸಿ ಅವರ ಸಾವಿಗೆ ಕಾರಣರಾಗಿರುವ ವೈದ್ಯರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ ಎಂದು ದೂರಿದರು. ಪತ್ರಿಕಾಗೋಷ್ಠಿಯಲ್ಲಿ ಮಂಜಪ್ಪ ನೀತಿಗೆರೆ, ಅನುಷ್, ಹನುಮಂತ ರಾಯ, ಹನುಮಂತಪ್ಪ, ಮಲ್ಲಿಕಾರ್ಜುನ್, ರಮೇಶ್ ಇತರರು ಉಪಸ್ಥಿತರಿದ್ದರು.

# ಹೊನ್ನಾಳಿ ಪಂಚಮಸಾಲಿ ಮಹಿಳಾ ಘಟಕದ ಪದಾಧಿಕಾರಿಗಳ ಪದಗ್ರಹಣ



ಹೊನ್ನಾಳಿ, ಜು.29- ತಾಲ್ಲೂಕು ಪಂಚಮಸಾಲಿ ಸಮಾಜದ ಮಹಿಳಾ ಅಧ್ಯಕ್ಷರಾಗಿ ಶಿಲ್ಪ ರಾಜುಗೌಡ, ಉಪಾಧ್ಯಕ್ಷರಾಗಿ ಮೀನಾಕ್ಷಮ್ಮ ಚಂದ್ರಶೇಖರ್, ಜಯಶ್ರೀ ಪಟ್ಟಣಶೆಟ್ಟಿ ಹಾಗೂ ಸಂಘದ ಸರ್ವ ಸದಸ್ಯರುಗಳಿಗೆ ದಾವಣಗೆರೆ ಜಿಲ್ಲಾ ಪಂಚಮಸಾಲಿ ಮಹಿಳಾ ಅಧ್ಯಕ್ಷರಾದ ಸುಷ್ಮಾ ಪಾಟೀಲ್ ಸಮಾಜ ಸಂಕೇತದ ಶಾಲು ಹಾಕುವ ಮೂಲಕ ಸಮಾಜದ ಪದಗ್ರಹಣ ಸಮಾರಂಭ ನಡೆಯಿತು.

ಉಪಾಧ್ಯಕ್ಷರುಗಳಾದ ಗೌಡ್ರ ಸಾವಿತ್ರಮ್ಮ, ಹಾಲಮ್ಮ ಬಸವರಾಜಪ್ಪ ಬೆನಕನಹಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಅನುರಾಧ ಚಂದ್ರಶೇಖರಪ್ಪ, ಕವಿತಾ ಚನ್ನೇಶ್, ಖಜಾಂಚಿಯಾಗಿ ಸುಮ ರವಿಕುಮಾರ್ ಆಯ್ಕೆಗೊಂಡರು.

ಸದಸ್ಯರಾಗಿ ಮಮತ ಗದ್ದಿಗೇಶ್, ಸುನಿತಾ ನಿಜಲಿಂಗಪ್ಪ ಸಾಸ್ವೇಹಳ್ಳಿ, ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಶಶಿ ದಿವಾಕರ್, ಉಷಾ ಚಿಕ್ಕಬಾಸೂರು, ಗಿರಿಜಮ್ಮ, ಅನ್ನಪೂರ್ಣೇಶ್ವರಿ ನಾಡಿಗ್, ಜ್ಯೋತಿ ಮಹದೇವಪ್ಪ, ಮಮತ ಕತ್ತಿಗೆ, ಶೋಭಾ ಕೆ.ಎಸ್, ರಶ್ಮಿ ರಾಜು, ಪವಿತ್ರಾ, ಪುಷ್ಪ ಆಯ್ಕೆಗೊಂಡರು.

ಈ ಸಂದರ್ಭದಲ್ಲಿ ಸಮಾಜದ ರಾಜ್ಯಾಧ್ಯಕ್ಷರಾದ ಜೆ.ಬಿ. ಪಾಟೀಲ್, ರಾಜ್ಯ ಮಹಿಳಾ ಕಾರ್ಯಾಧ್ಯಕ್ಷರಾದ ದಾವಣಗೆರೆ ರಶ್ಮಿ ನಾಗರಾಜ್, ಹೊನ್ನಾಳಿ ತಾಲ್ಲೂಕು ಸಮಾಜದ ಅಧ್ಯಕ್ಷರಾದ ವೀರಪ್ಪ ಪಟ್ಟಣಶೆಟ್ಟಿ, ಗೌರವಾಧ್ಯಕ್ಷ ಡಾ ರಾಜುಕುಮಾರ್, ರಾಜ್ಯ ಉಪಾಧ್ಯಕ್ಷ ಪರಮೇಶ್ ಪಟ್ಟಣಶೆಟ್ಟಿ, ಹರಿಹರ ಹೆಚ್.ಪಿ. ಬಾಬಣ್ಣ, ತಾಲ್ಲೂಕು ಯುವ ಘಟಕದ ಅಧ್ಯಕ್ಷ ಹಾಲೇಶ್, ನಗರ ಘಟಕದ ಅಧ್ಯಕ್ಷ ಹೆಚ್.ಪಿ. ಗಿರೀಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಉಕ್ಕಡಗಾತ್ರಿಯಲ್ಲಿ ಪುರಾಣ ಪ್ರವಚನಕ್ಕೆ ಚಾಲನೆ



ಮಲೇಬೆನ್ನೂರು, ಜು.29- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನದ ಆವರಣದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಒಂದು ತಿಂಗಳ ಕಾಲ ಹಮ್ಮಿಕೊಂಡಿರುವ ಶ್ರೀ ಉಳವಿ ಚನ್ನಬಸವೇಶ್ವರರ ಪುರಾಣ ಹೇಳುವುದಕ್ಕೆ ಶುಕ್ರವಾರ ದೇವಸ್ಥಾನದ ಕಾರ್ಯದರ್ಶಿ ಸುರೇಶ್ ಅವರು ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ತುಮ್ಮಿನಕಟ್ಟೆಯ ಚಂದ್ರಯ್ಯ ಮುದ್ದಣ್ಣನವರ್ ಅವರು, ಈ ಪುರಾಣವನ್ನು ಪ್ರತಿದಿನ ಸಂಜೆ ನಡೆಸಿಕೊಡಲಿದ್ದಾರೆ.

# 'ಅಮೃತ ಮಹೋತ್ಸವ ಯಶಸ್ವಿಗೆ' ಹದಡಿ ಬ್ಲಾಕ್ ಕಾಂಗ್ರೆಸ್ ಸಮಿತಿ ಸಭೆ



ದಾವಣಗೆರೆ, ಜು. 29- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ 75 ನೇ ಅಮೃತ ಮಹೋತ್ಸವ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಲು ಹದಡಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಸಭೆ ನಡೆಸಲಾಯಿತು.

ಜಿ.ಪಂ. ಮಾಜಿ ಸದಸ್ಯರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ. ಸಿ.ನಿಂಗಪ್ಪ ಅಧ್ಯಕ್ಷತೆ ವಹಿಸಿದ್ದರು. ಅಮೃತ ಮಹೋತ್ಸವದ ಯಶಸ್ಸಿಗೆ ಹದಡಿ ಬ್ಲಾಕ್ ನಿಂದ ಐವತ್ತು ಸಾವಿರ ಜನ ಸೇರಿಸಲು ಎಲ್ಲರೂ ಶ್ರಮಿಸೋಣ ಎಂದರು.

ಜಿಲ್ಲೆಯಲ್ಲಿ ಶಾಸಕರಾದ ಶಾಮನೂರು ಶಿವಶಂಕರಪ್ಪ ಹಾಗೂ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾರ್ಗದರ್ಶನದಲ್ಲಿ ಈ ಬಾರಿ ಅಧಿಕಾರ ಹಿಡಿಯಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸಭೆಯಲ್ಲಿ ಜಿ.ಪಂ. ಮಾಜಿ ಅಧ್ಯಕ್ಷ ತುರ್ಚಘಟ್ಟ ಬಸವರಾಜಪ್ಪ, ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ಬಿ. ದಿಳ್ಳಪ್ಪ, ಬಸವರಾಜಪ್ಪ, ಡಿ. ಮಲ್ಲಣ್ಣ. ಮಲ್ಲೇಶಪ್ಪ, ಸತ್ತೂರು ನಿಂಗಪ್ಪ. ಬಿಸ್ಲೇರಿ ವೀರಣ್ಣ, ಎಸ್.ಟಿ. ಘಟಕದ ಅಧ್ಯಕ್ಷ ಕುಕ್ಕವಾಡ ಮಂಜಣ್ಣ, ಕಿಸಾನ್ ಉಪಾಧ್ಯಕ್ಷ ಶಶಿಕುಮಾರ್, ಮಹಿಳಾ ಘಟಕದ ಅಧ್ಯಕ್ಷರಾದ ಪೂರ್ಣಿಮಾ ತುರ್ಚಘಟ್ಟ, ಅನ್ವರ್ ಹಾಗೂ ಹದಡಿ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು. ಜಿ.ಪಂ., ತಾ. ಪಂ.ಸದಸ್ಯರು. ಗ್ರಾ.ಪಂ.ಸದಸ್ಯರು., ಮುಖಂಡರು ಉಪಸ್ಥಿತರಿದ್ದರು.

ಶಿರಮಗೊಂಡನಹಳ್ಳಿ ರುದ್ರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು, ಹದಡಿ ಹೆಚ್. ಟಿ. ಮಹಾಂತೇಶ್ ನಿರೂಪಿಸಿದರು.

# ಹರಪನಹಳ್ಳಿ ಹಸಿರೀಕರಣಕ್ಕೆ ಶಾಸಕ ಕರುಣಾಕರ ರೆಡ್ಡಿ ಚಾಲನೆ



ಹರಪನಹಳ್ಳಿ, ಜು.29- ಪಟ್ಟಣವನ್ನು ಹಸಿರೀಕರಣ ಮಾಡುವ ನಿಟ್ಟಿನಲ್ಲಿ ರಸ್ತೆ ವಿಭಜಕಗಳ ಮಧ್ಯೆ ಸಸಿಗಳನ್ನು ನೆಡುವ ಕಾರ್ಯಕ್ರಮಕ್ಕೆ ಶಾಸಕ ಜಿ.ಕರುಣಾಕರ ರೆಡ್ಡಿ ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಚಾಲನೆ ನೀಡಿದರು.

ಪ್ರವಾಸಿ ಮಂದಿರ ವೃತ್ತದಿಂದ ಕೊಟ್ಟೂರು ಬೈಪಾಸ್ ರಸ್ತೆ, ಹೊಸಪೇಟೆ ರಸ್ತೆ, ಹರಿಹರ ವೃತ್ತ, ಇಜಾರಿ ಶಿರಸಪ್ಪ ವೃತ್ತ, ಅರಸಿಕೇರಿ ರಸ್ತೆ ಸೇರಿದಂತೆ ವಿವಿಧ ಕಡೆಗಳಲ್ಲಿ ಪುರಸಭೆ ಹಾಗೂ ಅರಣ್ಯ ಇಲಾಖೆಯಿಂದ ಗಿಡಗಳನ್ನು ನೆಡಲಾಯಿತು.

ನಂತರ ಶಾಸಕರು ತಾಲ್ಲೂಕಿನ ದುಗ್ಗಾವತಿ ಗ್ರಾಮದಲ್ಲಿ ವಲಯ ಮಟ್ಟದ ಕ್ರೀಡಾ ಕೂಟ ಉದ್ಘಾಟಿಸಿದರು. ರಾಗಿಮಸಲವಾಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಗಳ ಗುಂದಿ, ಶಿರಗನಹಳ್ಳಿ, ತುಂಬಿಗೆರೆ, ಶಂಕರನಹಳ್ಳಿ, ಕೋಡಿ ತಾಂಡಾ, ನಾಗಲಾಪುರ, ನಾಗಲಾಪುರ ತಾಂಡಾ, ರಾಗಿಮಸಲವಾಡ, ಅಣಿ ಮೇಗಳ ತಾಂಡಾಗಳಲ್ಲಿ ಶಾಸಕರ ನಡೆ ಗ್ರಾಮದ ಕಡೆ ಮತ್ತು ಜೆಜೆಎಂ ಉದ್ಘಾಟನೆ ನೆರವೇರಿಸಿ ಆಯಾ ಗ್ರಾಮಗಳ ಕುಂದು ಕೊರತೆಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಹೆಚ್.ಎಂ.ಅಶೋಕ, ಪುರಸಭೆ ಮಾಜಿ ಅಧ್ಯಕ್ಷ ಮಂಜುನಾಥ ಇಜಂತಕರ್, ಸದಸ್ಯರಾದ ಡಿ.ರೊಕ್ಕಪ್ಪ, ಜಾವೀದ್, ಕಿರಣ ಶ್ಯಾನಭೋಗ್, ಬಿಜೆಪಿ ಎಸ್.ಟಿ. ಘಟಕದ ಅಧ್ಯಕ್ಷ ಟಿ. ಮನೋಜ್, ಮುಖ್ಯಾಧಿಕಾರಿ ಶಿವಕುಮಾರ ಎರಗುಡಿ, ಇಓ ಪ್ರಕಾಶ್, ಎಇಇ ಸಿದ್ದರಾಜ, ಬಿಇಓ ಯು.ಬಸವರಾಜಪ್ಪ, ಕೃಷಿ ಸಹಾಯಕ ನಿರ್ದೇಶಕ ಗೊಂದಿ ಮಂಜುನಾಥ, ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ, ಪುರಸಭೆ ಆರೋಗ್ಯಾಧಿಕಾರಿ ಮಂಜುನಾಥ, ಪರಿಸರ ಅಭಿಯಂತರ ಅಂಬರೀಶ, ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ವಿಷ್ಣುವರ್ಧನ ರೆಡ್ಡಿ, ಆರ್.ಲೋಕೇಶ್, ಕೆಂಗಳ್ಳಿ ಪ್ರಕಾಶ್, ಕಣಿವಿಹಳ್ಳಿ ಮಂಜುನಾಥ, ಹೇಮಂತಕುಮಾರ್, ಮಹೇಶ ಪೂಜಾರ, ಹರಿಯಮ್ಮನಹಳ್ಳಿ ಮಂಜುನಾಥ್, ದಾದಾಪುರದ ಶಿವಾನಂದ, ಅನಂತನಹಳ್ಳಿ ಅಣ್ಣಪ್ಪ, ಪಿ.ಡಿ.ಓ. ಶ್ರೀನಿವಾಸ್ ಸೇರಿದಂತೆ ಇತರರು ಇದ್ದರು.

# ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯಡಿ ತರಬೇತಿ

ದಾವಣಗೆರೆ, ಜು.29- ಗ್ರಾಮಾಂತರ ಕೈಗಾರಿಕಾ ವಿಭಾಗ, ಜಿಲ್ಲಾ ಉದ್ಯಮ ಕೇಂದ್ರದ ವತಿಯಿಂದ ಜಿಲ್ಲೆಯ ಗ್ರಾಮೀಣ ಪ್ರದೇಶದ ವಿದ್ಯಾವಂತ ನಿರುದ್ಯೋಗಿಗಳಿಗೆ ಮೊಬೈಲ್ ರಿಪೇರಿ, ಮೋಟಾರ್ ರೀವೈಂಡಿಂಗ್, ಗೃಹ ಎಲೆಕ್ಟ್ರಿಕಲ್ ವೈರಿಂಗ್ ತಾಂತ್ರಿಕ ವಿಷಯಗಳ ಕುರಿತು ತೋಳಹುಣಸೆಯ ಕೆನರಾ ಬ್ಯಾಂಕ್‌ನ ಆರ್-ಸೆಟ್ ತರಬೇತಿ ಸಂಸ್ಥೆಯಲ್ಲಿ ಉಚಿತ ಹಾಗೂ ವಸತಿಯುತ ತರಬೇತಿಯನ್ನು ನೀಡಿ, ತರಬೇತಿಯ ನಂತರ ಪ್ರತಿ ಅಭ್ಯರ್ಥಿಗಳಿಗೆ ಐದು ಸಾವಿರ ಮೊತ್ತದ ಉಚಿತ ಉಪಕರಣಗಳ ಕಿಟ್ ಸಹ ನೀಡಲಾಗುತ್ತದೆ.

ಜಿಲ್ಲೆಯ ಗ್ರಾಮೀಣ ಅಭ್ಯರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಆಸಕ್ತ ಅಭ್ಯರ್ಥಿಗಳು ತೋಳಹುಣಸೆಯ ಕೆನರಾ ಬ್ಯಾಂಕ್‌ನ ಆರ್-ಸೆಟಿ ತರಬೇತಿ ಸಂಸ್ಥೆ ಅಥವಾ ಗ್ರಾಮೀಣ ಕೈಗಾರಿಕಾ ವಿಭಾಗದ ಉಪ ನಿರ್ದೇಶಕರು (ಖಾಗ್ರಾ) ಇವರ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದು.

ವಿವರಕ್ಕೆ ಸಂಪರ್ಕಿಸುವ ದೂರವಾಣಿ : 9778929717, 9845691957, 7019980484, 9964111314.

# ನೇಮಕಾತಿ : ನೇಕಾರರಿಗೆ ಅನ್ಯಾಯ ಖಂಡನೀಯ

ದಾವಣಗೆರೆ, ಜು.29- ನೇಕಾರರಿಗೆ ಸಂಬಂಧಿಸಿದ ಜವಳಿ ಮೂಲ ಅಭಿವೃದ್ಧಿ ನಿಗಮಕ್ಕೆ (ಪವರ್ ಲೂಮ್) ಅನ್ಯ ಜಾತಿಯವರನ್ನು ನೇಮಕ ಮಾಡಲಾಗಿರುವುದನ್ನು ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಗೌರವ ಅಧ್ಯಕ್ಷ ಡಿ. ಬಸವರಾಜ ಗುಬ್ಬಿ ಖಂಡಿಸಿದ್ದಾರೆ.

ರಾಜ್ಯದಲ್ಲಿ 60 ರಿಂದ 70 ಲಕ್ಷ ಜನಸಂಖ್ಯೆಯಿರುವ ನೇಕಾರರಿಗೆ ರಾಜಕೀಯ ಪ್ರಾತಿನಿಧ್ಯ ನೀಡದೆ, ಸಮಾಜವನ್ನು ಕೇವಲ ಮತ ಬ್ಯಾಂಕ್ ಆಗಿ ಪರಿಗಣಿಸಿರುವುದು ಸರಿಯಲ್ಲ. ಬೇರೆ ಬೇರೆ ಜಾತಿಯ ನಿಗಮ, ಮಂಡಳಿಗಳಿಗೆ ಆಯಾ ಜಾತಿಯವರನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಹಾಗೆ ನೇಕಾರರಿ ಗಾಗಿಯೇ ಮೀಸಲಾಗಿರುವ ನಿಗಮಗಳಿಗೆ ನೇಕಾರರನ್ನೇ ನೇಮಿಸಬೇಕು ಎಂದು ಮುಖ್ಯಮಂತ್ರಿಗಳನ್ನು ಬಸವರಾಜ ಗುಬ್ಬಿ ಮತ್ತು ಒಕ್ಕೂಟದ ರಾಜ್ಯ ಕಾರ್ಯದರ್ಶಿ ವಿ.ಇ.ಧರ್ಮರಾಜ್ ಏಕಬೋಟೆ ಒತ್ತಾಯಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ಇಲ್ಲ

ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ, ಬಸವ ಭೀಮ ನಗರ, ಕರ್ನಾಟಕ ಬೀಜ ನಿಗಮ, ರಾಮನಗರ, ಇಂಡಸ್ಟ್ರೀಯಲ್ ಏರಿಯಾ ಮತ್ತು ಸುತ್ತ-ಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಉಪರಾಷ್ಟ್ರಪತಿ ಅಭ್ಯರ್ಥಿಯನ್ನು ಭೇಟಿ ಮಾಡಿದ ಸಂಸದ ಜಿ.ಎಂ. ಸಿದ್ದೇಶ್ವರ



ದಾವಣಗೆರೆ, ಜು. 29- ಲೋಕಸಭಾ ಮುಂಗಾರು ಅಧಿವೇಶನ ನಡೆಯುತ್ತಿರುವ ವೇಳೆ ದೆಹಲಿಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಎನ್.ಡಿ.ಎ. ಮೈತ್ರಿಕೂಟದ ಉಪ ರಾಷ್ಟ್ರಪತಿ ಅಭ್ಯರ್ಥಿ ಜಗದೀಪ್ ಧನಕರ್ ಅವರನ್ನು ಇಂದು ಭೇಟಿ ಮಾಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಕೇಂದ್ರ ಗಣಿ ಮತ್ತು ಕಲ್ಲಿದ್ದಲ್ಲು ಖಾತೆ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಉಪಸ್ಥಿತರಿದ್ದರು.

# ನಗರದಲ್ಲಿಂದು 'ಜೀವನ್ಮುಖಿ' ಪುಸ್ತಕ ಬಿಡುಗಡೆ ಸಮಾರಂಭ

ಸ್ಫೂರ್ತಿ ಪ್ರಕಾಶನ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಹೆಚ್.ಎನ್. ಮಮತಾ ನಾಗರಾಜ್ ಇವರ 'ಜೀವನ್ಮುಖಿ' ಪುಸ್ತಕ ಬಿಡುಗಡೆ ಸಮಾರಂಭವನ್ನು ಇಂದು ಸಂಜೆ 4 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಏರ್ಪಡಿಸಲಾಗಿದೆ.

ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಎವಿಕೆ ಕಾಲೇಜಿನ ಡಾ. ಅನುರಾಧ ಬಕ್ಕಪ್ಪ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ ಭಾಗವಹಿಸಲಿದ್ದಾರೆ. ಕದಳಿ ಮಹಿಳಾ ವೇದಿಕೆ ಸ್ಥಾಪಕ ಅಧ್ಯಕ್ಷೆ ಯಶಾ ದಿನೇಶ್, ಸಾಹಿತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ಉಪಸ್ಥಿತರಿರುವರು. ಇದೇ ಸಂದರ್ಭದಲ್ಲಿ 'ಜೀವನ್ಮುಖಿ' ಕಿರುನಾಟಕ ಪ್ರದರ್ಶನಗೊಳ್ಳಲಿದೆ.

# ನಾಡಿದ್ದು ಸಿದ್ದರಾಮೇಶ್ವರ ರಥೋತ್ಸವ

ದಾವಣಗೆರೆ, ಜು.29- 60ನೇ ಸಿದ್ದರಾಮೇಶ್ವರ ರಥೋತ್ಸವವನ್ನು ಬರುವ ಆಗಸ್ಟ್ 1ರಂದು ಆಚರಿಸಲು ನಿರ್ಧರಿ ಸಲಾಗಿದೆ ಎಂದು ಚಿತ್ರದುರ್ಗ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮ ಸ್ವಾಮೀಜಿ ಹೇಳಿದರು.

ಭೋವಿ ಕಾಲೋನಿಯ ಶ್ರೀ ಸಿದ್ಧರಾಮೇಶ್ವರ ಮಠದಲ್ಲಿ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಥೋತ್ಸವ ಉದ್ಘಾಟಿಸು ವರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶರಣರ ಸ್ತಬ್ದ ಚಿತ್ರಗಳ ಮೆರವಣಿಗೆಗೆ ಚಾಲನೆ ನೀಡುವರು.

ಭೋವಿ ಸಮಾಜದ ಶಾಸಕರಾದ ಅರವಿಂದ ಲಿಂಬಾವಳಿ, ಹೊಳಲ್ಕೆರೆಯ ಎಂ ಚಂದ್ರಪ್ಪ, ಹೊಸದುರ್ಗದ ಗೂಳಿ ಹಟ್ಟಿ ಡಿ.ಶೇಖರ್, ಪಾವಗಡದ ವೆಂಕಟರ ಮಣಪ್ಪ, ಪುಲಕೇಶಿನಗರದ ಅಖಂಡ ಶ್ರೀನಿವಾಸಮೂರ್ತಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ನಗರದ ಬೇತೂರು ರಸ್ತೆಯಲ್ಲಿರುವ ಅರಳಿಮರ ಸರ್ಕಲ್‌ನಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ. ಶ್ರೀ ಶಿವಮೂರ್ತಿ ಮುರುಘಾ ಶರಣರು, ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಕುಂಚಿಟಿಗ ಗುರುಪೀಠದ ಡಾ.ಶಾಂತವೀರ ಸ್ವಾಮೀಜಿ, ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಮತ್ತಿತರರು ಆಗಮಿಸಲಿದ್ದಾರೆ.

ಧಾರ್ಮಿಕ ಕಾರ್ಯಕ್ರಮದಡಿ ಸಮಾಜ ಸಂಘಟನೆ ಉದ್ದೇಶ ನಮ್ಮದಾಗಿದ್ದು, ಕನಿಷ್ಠ 60 ಸಾವಿರದಿಂದ 1 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಸುಮಾರು 10 ಸಾವಿರ ಮಹಿಳೆಯರಿಂದ ಕುಂಭ ಮೇಳವಿದ್ದು 25 ಸಾವಿರ ಮಹಿಳೆಯರಿಂದ ರಥೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

100ಕ್ಕೂ ಹೆಚ್ಚು ಸಾಂಸ್ಕೃತಿಕ ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳ ಲಿವೆ. ಮೂಢನಂಬಿಕೆ ಹೋಗಲಾಡಿಸಿ ವೈಜ್ಞಾನಿಕ ಮನೋಭಾವ ಮೂಡಿಸುವಲ್ಲಿ ಸಿದ್ದರಾಮೇಶ್ವರರ ವಚನವನ್ನು ಇಲ್ಲಿ ಬಿತ್ತಲಾಗುತ್ತದೆ. ಅನುಭವ ಮಂಟಪದಲ್ಲಿ ಜಾತಿ ತಾರತಮ್ಯವಿಲ್ಲದೇ ಸೇರುತ್ತಿದ್ದವರ ಶರಣ ಸಂಗಮದ ರೀತಿ 60 ಸಮು ದಾಯದ ಶರಣರ ಭಾವಚಿತ್ರಗಳನ್ನು ರಥೋತ್ಸವದಲ್ಲಿ ಮೆರವಣಿಗೆ ಮಾಡಲಾಗುತ್ತದೆ ಎಂದು ಹೇಳಿದರು. ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಭೋವಿ ಸಮಾಜದ ಮುಖಂಡರಾದ ಆನಂದಪ್ಪ, ಹೆಚ್. ಜಯಣ್ಣ, ಆರ್. ಶ್ರೀನಿವಾಸ್, ಎ.ಬಿ. ನಾಗರಾಜ್, ಹನುಮಂತಪ್ಪ, ಚೌಡಪ್ಪ, ಉಮಾ, ವಿ. ಗೋಪಾಲ್, ಟಿ. ಶ್ರೀನಿವಾಸ್ ರಾಜು ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



# ವಿಶ್ವಮಾನವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷರಾಗಿ ಆನಂದಪ್ಪ

ದಾವಣಗೆರೆ, ಜು. 29- ವಿಶ್ವಮಾನವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷರಾಗಿ ನಿವೃತ್ತ ಇಂಜಿನಿಯರ್ ಎಸ್.ಎಲ್. ಆನಂದಪ್ಪ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕಾರ್ಯಾಧ್ಯಕ್ಷ ಎನ್.ಜೆ. ನಿಂಗಪ್ಪ ಹಾಗೂ ಪ್ರಧಾನ ಕಾರ್ಯದರ್ಶಿ ಕೆ. ವೆಂಕಟೇಶ್ ತಿಳಿಸಿದ್ದಾರೆ.

# ನಗರದಲ್ಲಿ ವಿನೂತನ ಆಭರಣ ಪ್ರದರ್ಶನ





ದಾವಣಗೆರೆ, ಜು. 29- ನಗರದ ಎಸ್.ಎಸ್. ಮಾಲ್ ಸಭಾಂಗಣದಲ್ಲಿ ಗೋಲ್ಡನ್ ಕ್ರೀಪರ್ ಸಂಸ್ಥೆ ಇಂದಿನಿಂದ 3 ದಿನ ಆಯೋಜಿಸಿರುವ ವಿನೂತನ ಆಭರಣಗಳ ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಶುಕ್ರವಾರ ಚಾಲನೆ ನೀಡಿದರು.

ಆಭರಣ ಖರೀದಿಸಲು ಒಂದೇ ವೇದಿಕೆಯಲ್ಲಿ ಭಾರತದ 40 ಹೆಸರಾಂತ ಆಭರಣ ಮಳಿಗೆಗಳಿವೆ. ಎಲ್ಲಾ ಮಳಿಗೆಗಳನ್ನು ವೀಕ್ಷಿಸಿದ ಎಸ್ಸೆಸ್ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಚಿತ್ರನಟಿ ಧನ್ಯ ರಾಮ್ ಕುಮಾರ್, ಗೋಲ್ಡನ್ ಕ್ರೀಪರ್ ಸಂಸ್ಥೆಯ ಬಿ.ಎನ್. ಜಗದೀಶ್, ಹೇಮಲತಾ ಜಗದೀಶ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ನಟಿ ಧನ್ಯ ರಾಮ್ ಕುಮಾರ್, ಬೆಣ್ಣೆ ನಗರಿಯ ಜನ ಬೆಣ್ಣೆಯಂತೆ ಮೃದು ಸ್ವಭಾವದವರು. ಕನ್ನಡ ಚಿತ್ರಗಳನ್ನು ಮತ್ತು ಉದಯೋನ್ಮುಖ ನಟ, ನಟಿಯರನ್ನು ಪ್ರೋತ್ಸಾಹಿಸುವ ಮನಸ್ಸುಳ್ಳವರಾಗಿದ್ದಾರೆ ಎಂದು ಹೇಳಿದರು.

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸ್‌ಗಳು
1. Diploma in Patient Care Nursing
2. Operation Theatre Techinician
3. E.C.G. Techinician
4. Dental Technician 5. X-Ray Technician
6. MRI Scan Technician 7. CT Scan Techinicain
ಈ ಕೆಲಸದಲ್ಲಿ ಅನುಭವ ಇರುವವರು ಸಂಪರ್ಕಿಸಿ
MANASA EDUCATION TRUST
L.K. Complex, Ashoka Road, Davangere
97402 58276

WANTED

Gym Sector Tele Caller
(Female Only)
Qualification - Any Degree
Salary - 8,000+Incentive
Adress : Richton Furnitures building, 2nd floor, 4th Main Road, SS Layout, Davangere - 577 004
(Friday - Sunday) Interview Time - 11 AM to 5 PM
Contact No. : 96328 57012

LADIES PG BUILDING
FOR RENT
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
S.N. Layout Davangere.
Mobi.: 95351 14063
96203 71544 97428 35642

# ಜಿಲ್ಲಾ ಕಸಾಪದಿಂದ ಜೋಷಿಗೆ ಸನ್ಮಾನ



ದಾವಣಗೆರೆ, ಜು. 29- ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ್ ಜೋಷಿ ಅವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ಇಂದು ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಕನ್ನಡ ಭವನಕ್ಕೆ ಭೇಟಿ ನೀಡಿದ್ದರು.

ಇದೇ ಪ್ರಪ್ರಥಮ ಬಾರಿಗೆ ಕುವೆಂಪು ಕನ್ನಡ ಭವನಕ್ಕೆ ಆಗಮಿಸಿದ್ದ ಹಿನ್ನೆಲೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಮಹೇಶ್ ಜೋಷಿ ಅವರನ್ನು ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೋಷಿ, ಕುವೆಂಪು ಕನ್ನಡ ಭವನವನ್ನು ನೋಡಿ ಹರ್ಷ ವ್ಯಕ್ತಪಡಿಸಿದರಲ್ಲದೇ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕೇಂದ್ರ ಪರಿಷತ್ತಿನ ಕೆಲವು ವಿಷಯಗಳನ್ನೂ ಪ್ರಸ್ತಾಪಿಸಿದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಕೋಶಾಧ್ಯಕ್ಷ ರಾಘವೇಂದ್ರ ನಾಯರಿ, ಕಾರ್ಯಾಲಯದ ಕಾರ್ಯದರ್ಶಿ ಸಿ.ಜಿ. ಜಗದೀಶ್ ಕೂಲಂಬಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ತಾಲ್ಲೂಕು ಅಧ್ಯಕ್ಷರಾದ ಎ.ಜಿ. ಸುಮತಿ ಜಯಪ್ಪ, ಡಿ.ಎಂ. ಮಂಜುನಾಥಯ್ಯ, ಪದಾಧಿಕಾರಿಗಳಾದ ಜ್ಯೋತಿ ಉಪಾಧ್ಯಾಯ, ದಾಗಿನಕಟ್ಟೆ ಪರಮೇಶ್ವರಪ್ಪ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸಂಕ್ಲೀಪುರ - ಮುಕ್ತೇನಹಳ್ಳಿ ಸಂಪರ್ಕ ಬಂದ್



## ಸ್ಥಳಕ್ಕೆ ಅಧಿಕಾರಿಗಳ ಭೇಟಿ: ರೈತರಿಂದ ಆಕ್ರೋಶ

ಮಲೇಬೆನ್ನೂರು, ಜು.29- ಬುಧವಾರ ರಾತ್ರಿ ಸುರಿದ ಮಳೆಯಿಂದಾಗಿ ಮತ್ತು ದೇವರಬೆಳಕೆರೆ ಪಿಕಪ್ ಡ್ಯಾಂ ಹಿನ್ನೀರು ಹಾಗೂ ಸೂಳೆಕೆರೆ ಹಳ್ಳದ ನೀರಿನಿಂದಾಗಿ ಸಂಕ್ಲೀಪುರ - ಮುಕ್ತೇನಹಳ್ಳಿ ಸಂಪರ್ಕ ಸೇತುವೆ ನೀರಿನಲ್ಲಿ ಮುಳುಗಡೆ ಆಗಿದೆ. ಅಲ್ಲದೇ, ಸುಮಾರು ನೂರು ಎಕರೆ ಭತ್ತದ ನಾಟಿ ಜಲಾವೃತವಾಗಿದ್ದು, ರೈತರು ಜಿಲ್ಲಾಡಳಿತದ ನಿರ್ಲಕ್ಷ್ಯಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ ಸ್ಥಳಕ್ಕೆ ಭೇಟಿ ನೀಡಿದ ಉಪ ತಹಶೀಲ್ದಾರ್ ಆರ್.ರವಿ, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ ಅವರ ಸಮ್ಮುಖದಲ್ಲೇ ರೈತರು ಈ ಹಿಂದೆ ಇದ್ದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಇದೇ ರೀತಿ ಸೇತುವೆ ಮುಳುಗಿದಾಗ ಬಂದು ಹೊಸ ಸೇತುವೆ ನಿರ್ಮಿಸುತ್ತೇವೆ ಎಂದು ಹೇಳಿ ಹೋದರು. ಇದುವರೆಗೂ ಈ ಬಗ್ಗೆ ಯಾರೂ ಸಹ ಮಾತನಾಡಿಲ್ಲ. ನಮ್ಮ ಗೋಳು ಕೇಳುವರ್‍ಯಾರು ? ಎಂದು ರೈತರು ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ.

ರೈತರ ಈ ಪ್ರಶ್ನೆಗಳಿಗೆ ಉತ್ತರ ನೀಡಲಾಗದೇ, ಅಧಿಕಾರಿಗಳು ಮೇಲಾಧಿಕಾರಿಗಳಿಗೆ ವಿಷಯ ತಿಳಿಸುವುದಾಗಿ ಹೇಳಿ ಬಂದಿದ್ದಾರೆ.

# ಸೋಮವಾರ ಲೋಕಸಭೆಯಲ್ಲಿ ಬೆಲೆ ಏರಿಕೆ ಚರ್ಚೆ

ನವದೆಹಲಿ, ಜು. 29 – ಲೋಕಸಭೆಯಲ್ಲಿ ಸೋಮವಾರ ಹಾಗೂ ರಾಜ್ಯಸಭೆಯಲ್ಲಿ ಮಂಗಳವಾರ ಬೆಲೆ ಏರಿಕೆ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ. ಬೆಲೆ ಏರಿಕೆ ಕುರಿತು ಚರ್ಚೆ ನಡೆಸುವಂತೆ ಕಳೆದ ಎರಡು ವಾರಗಳಿಂದ ಪ್ರತಿಪಕ್ಷಗಳು ತೀವ್ರ ಗದ್ದಲ ನಡೆಸುತ್ತಾ ಸಂಸತ್ ಕಲಾಪಕ್ಕೆ ಅಡ್ಡಿಪಡಿಸುತ್ತಿವೆ. ಜುಲೈ 18ರಿಂದ ಸಂಸತ್ ಅಧಿವೇಶನ ಆರಂಭವಾಗಿದೆ. ಆಗಿನಿಂದಲೂ ಪ್ರತಿಪಕ್ಷಗಳು ಜಿ.ಎಸ್.ಟಿ. ಹಾಗೂ ಬೆಲೆ ಏರಿಕೆಯ ಚರ್ಚೆಗಾಗಿ ಒತ್ತಾಯಿಸುತ್ತಿವೆ. ಕಳೆದ ಎರಡು ದಿನಗಳಿಂದ ಸಂಸತ್ತಿನ ಉಭಯ ಸದನಗಳಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ನೀಡಿದ 'ರಾಷ್ಟ್ರಪತ್ನಿ' ಹೇಳಿಕೆ ವಿವಾದದ ಗದ್ದಲ ನಡೆದಿತ್ತು.






# 8 ಮೂಲಭೂತ ವಲಯಗಳಲ್ಲಿ ಶೇ.12.7ರ ಬೆಳವಣಿಗೆ

ನವದೆಹಲಿ, ಜು. 29 – ಕಳೆದ ಜೂನ್ ತಿಂಗಳಲ್ಲಿ ಎಂಟು ಮೂಲಭೂತ ಕೈಗಾರಿಕಾ ವಲಯಗಳಲ್ಲಿ ಶೇ.12.7ರ ಬೆಳವಣಿಗೆಯಾಗಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ ಶೇ.9.4ರ ಬೆಳವಣಿಗೆಯಾಗಿತ್ತು.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ವಲಯ, ರಸಗೊಬ್ಬರ, ಉಕ್ಕು, ಸಿಮೆಂಟ್ ಹಾಗೂ ವಿದ್ಯುತ್ ವಲಯದಲ್ಲಿ ಈ ಬೆಳವಣಿಗೆಯಾಗಿದೆ. ಜೂನ್ ತಿಂಗಳಲ್ಲಿ ಕಲ್ಲಿದ್ದಲು ವಲಯದಲ್ಲಿ ಅತಿ ಹೆಚ್ಚಿನ ಶೇ.31.1ರ ಬೆಳವಣಿಗೆಯಾಗಿದೆ. ಕಚ್ಚಾ ತೈಲದ ಉತ್ಪಾದನೆ ಶೇ.1.7ರಷ್ಟು ಕಡಿಮೆಯಾಗಿದೆ.

# ನಗರಕ್ಕೆ ಇಂದು ಚಕ್ರವರ್ತಿ ಸೂಲಿಬೆಲೆ

ದಾವಣಗೆರೆ ಪ್ರೇರಣಾ ಯುವ ಸಂಸ್ಥೆ ವತಿಯಿಂದ ಇಂದು ಸಂಜೆ 5.30 ಕ್ಕೆ ಗುಂಡಿ ಮಹ ದೇವಪ್ಪ ಕಲ್ಯಾಣ ಮಂದಿರದಲ್ಲಿ 23 ನೇ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಗು ತ್ತದೆ. ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಪ್ರಮುಖ ಭಾಷಣಕಾರರಾಗಿ ಆಗಮಿಸಲಿದ್ದು, ನಿಕಟಪೂರ್ವ ಮಹಾಪೌರ ಎಸ್.ಟಿ. ವೀರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.



# ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಮಾಗಿ ಕುಟುಂಬದವರಿಂದ ಅಕ್ಕಿ ಸಮರ್ಪಣೆ

ದಿ. ಶ್ರೀಮತಿ ಬಸಮ್ಮ ಮಾಗಿ ಮತ್ತು ದಿ. ವೀರಬಸಪ್ಪ ಮಾಗಿ ದಂಪತಿ ಕುಟುಂಬದಿಂದ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಎರಡನೇ ವರ್ಷದ ಅಕ್ಕಿ ಸಮರ್ಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಹಳೇಪೇಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ಪೂಜೆ ಸಲ್ಲಿಸುವುದರ ಮೂಲಕ ಒಂದು ಲೋಡ್ ಅಕ್ಕಿಯನ್ನು ಧರ್ಮಸ್ಥಳಕ್ಕೆ ಕಳುಹಿಸಲಾಗುತ್ತದೆ ಎಂದು ಜಯಪ್ರಕಾಶ್ ಮಾಗಿ, ಕೈಲಾಸಬಾಬು ಮಾಗಿ ತಿಳಿಸಿದ್ದಾರೆ.


## ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್ | 96861 95327, ಚಾಮರಾಜಪೇಟೆ, ದಾವಣಗೆರೆ - 577 001.


## ಸವಿನೆನಪು



### ಲಿಂ. ಶ್ರೀ ವೀರಬಸಪ್ಪ ಮಾಗಿ

ಮಾಲೀಕರು, ರೈಸ್ ಕಾರ್ನರ್ ಮತ್ತು ಹೆಸರಾಂತ ಅಕ್ಕಿ ವರ್ತಕರು

ಲಿಂ. 30.07.2021

*"ನಿಮ್ಮ ನೆನಪು ಸದಾ ಹಚ್ಚ ಹಸಿರು*
*ನಿಮ್ಮ ಆದರ್ಶವೇ ನಮಗೆ ದಾರಿದೀಪ*
*ನಿಮ್ಮ ಮಾರ್ಗದರ್ಶನವೇ ನಮಗೆ ಚೇತನ"*

ಸದಾ ಸ್ಮರಿಸುವ...

- ಶ್ರೀಮತಿ ಲತಾ ಮತ್ತು ಪಂಚಾಕ್ಷರಿ
- ಶ್ರೀಮತಿ ರೂಪಾ ಮತ್ತು ಕೈಲಾಸ್ ಬಾಬು ಮಾಗಿ
- ಶ್ರೀಮತಿ ದಾನೇಶ್ವರಿ ಮತ್ತು ಎಂ.ವಿ. ಜಯಪ್ರಕಾಶ್ ಮಾಗಿ
- ಶ್ರೀಮತಿ ಶಿವಲೀಲಾ ಮತ್ತು ರಾಜೇಶ್

ಮೊಮ್ಮಕ್ಕಳು :

- ಮಮತ ✦ ಗಣೇಶ್ ✦ ನಿಖಿಲ್ ಮಾಗಿ
- ಹರ್ಷ ಮಾಗಿ ✦ ಕಿಶೋರ್ ಮಾಗಿ
- ದಿಶಾ ✦ ಶ್ರೇಯಸ್

ಹಾಗೂ ಮಾಗಿ ಕುಟುಂಬ ವರ್ಗದವರು, ದಾವಣಗೆರೆ

- ರೈಸ್ ಕಾರ್ನರ್
- ಹರ್ಷ ಕಮರ್ಷಿಯಲ್ಸ್
- ಜೆ.ಪಿ. ಎಂಟರ್‌ಪ್ರೈಸಸ್

ಗುಜರಿ ಲೈನ್ ಚೌಕಿಪೇಟೆ ಹಿಂಭಾಗ, ದಾವಣಗೆರೆ.


## ಶ್ರೀ ನಂದಿ ಸೌಹಾರ್ದ ಸಹಕಾರಿ ನಿ., ಮಲೇಬೆನ್ನೂರು.

ಪ್ರಧಾನ ಕಛೇರಿ, ಮಲೇಬೆನ್ನೂರು, ಶಾಖೆ : ನಂದಿಗುಡಿ, ಹರಿಹರ ತಾಲ್ಲೂಕು

### ಸೌಹಾರ್ದ ಸಹಕಾರಿಯ 2021-2022ನೇ ಸಾಲಿನ ತೃತೀಯ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ



ಶ್ರೀ ಜಿ.ಎಂ. ಸಿದ್ದೇಶ್ವರ ಸಂಸದರು ದಾವಣಗೆರೆ. | ಶ್ರೀ ಜೆ.ಸಿ. ಮಾಧುಸ್ವಾಮಿ ಸಣ್ಣ ನೀರಾವರಿ ಸಚಿವರು, ಕ.ಸರ್ಕಾರ | ಶ್ರೀ ಶಾಮನೂರು ಶಿವಶಂಕರಪ್ಪ ಶಾಸಕರು, ದಾವಣಗೆರೆ. | ಶ್ರೀ ಹೆಚ್.ಕೆ. ಪಾಟೀಲ್ ಶಾಸಕರು, ಮಾಜಿ ಸಚಿವರು, ಗದಗ. | ಶ್ರೀ ಕೆ.ಎಸ್. ಲಿಂಗೇಶ್ ಶಾಸಕರು ಬೇಲೂರು. | ಶ್ರೀ ಎಸ್. ರಾಮಪ್ಪ ಶಾಸಕರು ಹರಿಹರ. | ಶ್ರೀ ಬಿ.ಪಿ. ಹರೀಶ್ ಮಾಜಿ ಶಾಸಕರು ಹರಿಹರ. | ಶ್ರೀ ಹೆಚ್.ಎಸ್. ಶಿವಶಂಕರ್ ಮಾಜಿ ಶಾಸಕರು

ನಮ್ಮ ಸಹಕಾರಿಯ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹಾಗೂ ಸಚಿವರಿಗೆ, ಸಂಸದರಿಗೆ, ಶಾಸಕರಿಗೆ ಸನ್ಮಾನ ಸಮಾರಂಭವನ್ನು ದಿ. : 31.07.2022ನೇ ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಹರಿಹರ ತಾ. ನಂದಿಗುಡಿ ಗ್ರಾಮದ ಶ್ರೀ ನಂದೀಶ್ವರ ಸಮುದಾಯ ಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಇಂದೂಧರ್ ಎನ್. ರುದ್ರಗೌಡ ಇವರ ಘನ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿದೆ. ಆದ್ದರಿಂದ ಮಾನ್ಯ ಸರ್ವಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

### ಆರ್ಥಿಕ ಪ್ರಗತಿಯ ಪಕ್ಷಿನೋಟ

| ವಿವರಗಳು | ದಿನಾಂಕ : 2020-21ಕ್ಕೆ | ದಿನಾಂಕ : 2021-22ಕ್ಕೆ |
|---|---|---|
| 1) ಷೇರು ಬಂಡವಾಳ | 69,86,300 | 80,88,300 |
| 2) ಸದಸ್ಯರ ಸಂಖ್ಯೆ | 2769 | 2763 |
| 3) ಠೇವಣಿಗಳು | 4,06,77,012 | 4,64,33,121 |
| 4) ನಂದಿ ನಿತ್ಯನಿಧಿ | 3,04,47,320 | 3,23,14,275 |
| 5) ಕಾಯ್ದಿಟ್ಟ ನಿಧಿ | 75,60,543 | 82,91,282 |
| 6) ಇತರೆ ನಿಧಿಗಳು | 1,66,25,901 | 1,88,86,096 |
| 7) ಸದಸ್ಯರಿಗೆ ಸಾಲಗಳು | 8,28,43,040 | 10,56,53,828 |
| 8) ದುಡಿಯುವ ಬಂಡವಾಳ | 14,72,45,574 | 16,45,34,323 |
| 9) ಲಾಭ | 29,12,256 | 27,62,888 |
| 10) ಆಡಿಟ್ ಶ್ರೇಣಿ | ಬಿ | ಬಿ |
| 11) ಸದಸ್ಯರಿಗೆ ಡಿವಿಡೆಂಡ್ | 11% | 12% ಉದ್ದೇಶಿತ |

### ಸಂಘದ ಆಡಳಿತ ಮಂಡಳಿ



ಇಂದೂಧರ ಎನ್. ರುದ್ರಗೌಡ ಅಧ್ಯಕ್ಷರು, ಜಿಗಳಿ. | ಶ್ರೀಮತಿ ಭಾಗ್ಯ ಉದಯಗೌಡ ಉಪಾಧ್ಯಕ್ಷರು, ಹಿಂಡಸಘಟ್ಟ. | ಹೆಚ್.ಟಿ. ಶಾಂತನಗೌಡ ನಿರ್ದೇಶಕರು, ಹಳ್ಳಿಹಾಳ್. | ಹೆಚ್. ವೀರನಗೌಡ್ರು ನಿರ್ದೇಶಕರು, ಹಳ್ಳಿಹಾಳ್ | ಬಿ. ಬಸವರಾಜಪ್ಪ ನಿರ್ದೇಶಕರು, ಜಿಗಳಿ. | ಹೆಚ್.ಟಿ. ಪರಮೇಶ್ವರಪ್ಪ ನಿರ್ದೇಶಕರು, ಹಳ್ಳಿಹಾಳ್.

ಎಂ.ವಿ. ನಾಗರಾಜ್ ನಿರ್ದೇಶಕರು, ಜಿಗಳಿ | ಬಿ.ಹೆಚ್. ರವಿ ನಿರ್ದೇಶಕರು, ಕೊಕ್ಕನೂರು. | ಕೆ.ಹೆಚ್. ಆಂಜನೇಯ ನಿರ್ದೇಶಕರು, ಕೊಕ್ಕನೂರು. | ಸಂತೋಷ್ ಪಾಳೇದ ನಿರ್ದೇಶಕರು, ಜಿ.ಬೇವಿನಹಳ್ಳಿ. | ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ ಉಪಾಧ್ಯಕ್ಷರು, ಜಿ.ಬೇವಿನಹಳ್ಳಿ | ಎ. ಆರೀಫ್ ಅಲಿ ನಿರ್ದೇಶಕರು, ಮಲೇಬೆನ್ನೂರು.

ಟಿ. ರಾಮಚಂದ್ರಪ್ಪ ನಿರ್ದೇಶಕರು, ಕೊಕ್ಕನೂರು. | ಆರ್. ನಾಗರಾಜ ನಿರ್ದೇಶಕರು, ಕೊಕ್ಕನೂರು. | ಎ.ಕೆ. ತಿಪ್ಪೇಶಪ್ಪ ನಿರ್ದೇಶಕರು, ಹಳ್ಳಿಹಾಳ್.

ಸೂಚನೆ : ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯ ಪ್ರಕಾರ ಸಹಕಾರಿಯ ಸದಸ್ಯರು ಸಹಕಾರಿಯ 05 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ ಯಾವುದೇ 02 ಮಹಾಸಭೆಗಳಿಗೆ ಹಾಜರಾಗುವುದು, ಹಾಗೂ ಕನಿಷ್ಠ 2 ವರ್ಷಗಳಲ್ಲಿ ಕನಿಷ್ಠ 1000/- ರೂಪಾಯಿಗಳ ವ್ಯವಹಾರವನ್ನು ಮಾಡುವುದು ಕಡ್ಡಾಯ. ಇವುಗಳನ್ನು ಪಾಲಿಸದೇ ಇದ್ದಲ್ಲಿ ಮುಂಬರುವ ಆಡಳಿತ ಮಂಡಲಿಯ ಚುನಾವಣೆಯಲ್ಲಿ ಪಾಲ್ಗೊಳ್ಳಲು ಹಾಗೂ ಮತ ಚಲಾಯಿಸಲು ಅನರ್ಹರಾಗುತ್ತಾರೆ.

ವಿ.ಸೂ. : ಈಗಾಗಲೇ ಸಹಕಾರಿಯ ಎಲ್ಲಾ ಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ಮಹಾಸಭೆಗೆ ಬರುವಾಗ ಮಾನ್ಯ ಸದಸ್ಯರು ಆಹ್ವಾನ ಪತ್ರಿಕೆಯನ್ನು ತಪ್ಪದೇ ತರಕ್ಕದ್ದು, ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನ ಪತ್ರವೆಂದು ಭಾವಿಸಿ ಆಗಮಿಸಲು ಕೋರಿದೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte